ಶ್ರೀ ಜಗದೀಶ್ ಶೆಟ್ಟರ್ :-- ಮಾನ್ಯ ಉಪಾಧ್ಯಕ್ಷರೆ, ಈಗ ಬಿಲ್ ನಂ 9 ಪಾಸ್ ಆಯಿತು, ವಿಧೇಯಕ ಸಂಖ್ಯೆ 8 ಕ್ಕೆ ಮಾಹಿತಿಯನ್ನು ಕೊಡಬೇಕು. ನಂತರ ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುತ್ತೇನೆ.

ಇ) **ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 2007**

ಉಪಾಧ್ಯಕ್ಷರು :-- ಈಗ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 2007 ರ ಪರ್ಯಾಲೋಚನಾ ಪ್ರಸ್ತಾವ.

(4 : 30)

ಉಪಾಧ್ಯಕ್ಷರು :-- ಈಗ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2007 ಮಾನ್ಯ ಸಿ.ಎಂ. ಉದಾಸಿಯವರು.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-- ಮಾನ್ಯ ಉಪಾಧ್ಯಕ್ಷರೆ, ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2007 ಅನ್ನು ಪರ್ಯಾಲೋಚಿಸಲು ಕೋರುತ್ತೇನೆ.

ಉಪಾಧ್ಯಕ್ಷರು :-- ತಾವು ಬಿಲ್ ಬಗ್ಗೆ explain ಮಾಡಿ.

ಶ್ರೀ ಸಿ.ಎಂ. ಉದಾಸಿ :-- ಮಾನ್ಯ ಉಪಾಧ್ಯಕ್ಷರೆ, ರಾಜ್ಯದಾದ್ಯಂತ ಆಶ್ರಯ ಮನೆಗಳ ನಿರ್ಮಾಣ ಮಾಡಬೇಕಾದಂಥ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದಂತಹ ಅಧಿಕಾರವನ್ನು ಗ್ರಾಮ ಸಭೆಗಳಿಗೆ ಮತ್ತು ವಾರ್ಡ್ ಸಭೆಗಳಿಗೆ ಕೊಟ್ಟಿರುವಾಗ, ಪಂಚಾಯತ್ ಕೊನೆಗೆ ತೀರ್ಮಾನ ಮಾಡಿ, ಅದಕ್ಕೆ ಅಂತಿಮವಾಗಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಕೊಡುವಂಥ ಕೆಲಸ ರಾಜ್ಯದಾದ್ಯಂತ ನಾವು ನಿರೀಕ್ಷೆ ಮಾಡಿದಂಥ ಪ್ರಮಾಣದಲ್ಲಿ, ನಿಗದಿತ ಸಮಯದಲ್ಲಿ ಆಗುತ್ತಿಲ್ಲ, ಮತ್ತು ಅನೇಕ ಸಂದರ್ಭದಲ್ಲಿ ನಾವು ದೂರುಗಳನ್ನು ಸಹ ಕೇಳುತ್ತಿರುವುದರಿಂದ, ಈ ದೂರುಗಳನ್ನು ನಿವಾರಣೆ ಮಾಡುವ ಸಲುವಾಗಿ, ನಾವು ಕಾನೂನಿನಲ್ಲಿ ತಿದ್ದುಪಡಿಯನ್ನು ಮಾಡಿ, ಈ ಅಧಿಕಾರಕ್ಕೆ ಒಂದು ಕಮಿಟಿಯನ್ನು ಮಾಡಿ, ಆ ಕಮಿಟಿ ಮುಖೇನಾ ಆಯ್ಕೆ ಮಾಡಬೇಕಾದಂಥ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಅಧಿಕಾರವನ್ನು ಕೊಡುವ ಸಲುವಾಗಿ, ಈ ತಿದ್ದುಪಡಿಯನ್ನು ಕರ್ನಾಟಕ ಪಂಚಾಯತ್ ರಾಜ್ 1993 ರಲ್ಲಿ 14 ರಲ್ಲಿ ಇರುವಂಥ 3 ನೇ ಪ್ರಕರಣ 3 ನೇ ಉಪ ಪ್ರಕರಣದಲ್ಲಿ ಬಿ. ತಂಡಕ್ಕೆ ಹಾಗೂ

3(ಎ) ಪ್ರಕರಣದಲ್ಲಿ 3 ನೇ ಉಪಬಂಧದಲ್ಲಿ ಸಿ ಖಂಡದ ತರುವಾಯ ಮುಂದಿನವುಗಳನ್ನು ಸೇರಿಸತಕ್ಕದ್ದು, ಎಂದು ನಾವು ಪ್ರಸ್ತಾವವನ್ನು ಮಂಡಿಸುತ್ತಿದ್ದೇವೆ.

ಡಾ|| ಶರಣ ಪ್ರಕಾಶ್ ಆರ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು, ಇಡೀ ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಲಿ ಪೆಟ್ಟು ಹಾಕತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ.

(ಗೊಂದಲ)

ಡಾ|| ಶರಣ ಪ್ರಕಾಶ್ ಆರ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ತಾವು ನನಗೆ ರಕ್ಷಣೆ ಕೊಡಬೇಕು. ನಾನು ಇಲ್ಲಿ ಬಿಲ್ ಬಗ್ಗೆ ಪ್ರಸ್ತಾವನೆ ಮಾಡುವುದಕ್ಕೆ ನಿಂತಿದ್ದೇನೆ. ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ರೀತಿ ಸದಸ್ಯರು ನಮ್ಮ ಹಕ್ಕುಗಳನ್ನು ....

(ಗೊಂದಲ)

ಉಪಾಧ್ಯಕ್ಷರು :– ಎಲ್ಲರೂ ಕುಳಿತುಕೊಳ್ಳಿ, ಅವರು ಮಾತನಾಡಲಿ, ಮಾನ್ಯ ಮಂತ್ರಿಯವರು ಬಿಲ್ ಬಗ್ಗೆ explain ಮಾಡಿದ್ದಾರೆ, ಮಾನ್ಯ ಸದಸ್ಯರು ಕೇಳಬಾರದೆ? ಮಾನ್ಯ ರೇಣುಕಾಚಾರ್ಯರವರೆ, ಮಾನ್ಯ ಮಂತ್ರಿಯವರು ವಿಷಯದ ಬಗ್ಗೆ explain ಮಾಡಿದ್ದಾರೆ. ಅವರು ಕೇಳುವಂಥಾದ್ದಕ್ಕೆ ಒಂದು ಅವಕಾಶ ಇಲ್ಲದೇ ಸುಮ್ಮನೆ ಇದ್ದು ಬಿಟ್ಟರೆ, ಅವರು ಏನು ಹೇಳುತ್ತಾರೋ ಕೇಳಿ.

ಶ್ರೀ ಡಿ.ಕೆ. ಶಿವಕುಮಾರ್ :– ಮಾನ್ಯ ಉಪಾಧ್ಯಕ್ಷರೆ, ಅವರು ಮೆಂಬರ್ ಆಗಿದ್ದಾರೆ. ಈ ಬಿಲ್ ಬಗ್ಗೆ ಅವರದೇ ಆದಂಥ ಅಭಿಪ್ರಾಯವನ್ನು ಹೇಳುವುದಕ್ಕೆ ತಯಾರಿದ್ದಾರೆ. ಇವರು ಹೇಳಿದ್ದೆಲ್ಲಾ ಕರೆಕ್ಟ್ ಎಂದು ವಾದಿಸುವುದು ಒಳ್ಳೆಯದು, ಇವರು ಹೇಳಿದ್ದು ಸರಿಯಿಲ್ಲವೆಂದು, ಹೇಳುವುದು ಸರಿ ಇಲ್ಲ. ಅದುದರಿಂದ ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಬಿಲ್ ಅನ್ನು present ಮಾಡಿದರು. ನಮ್ಮದು ಒಂದು ಅಭಿಪ್ರಾಯವಿದೆ, ಇವರದ್ದು ಒಂದು ಅಭಿಪ್ರಾಯವಿದೆ, ಅವರು ನಿಂತುಕೊಂಡು ಅದನ್ನು ಸರಿ ಇದೆಯೆಂದು welcome ಮಾಡಲಿಲ್ಲವೇ? ಅವರು ಒಬ್ಬ ಗೌರವಾನ್ವಿತ ಸದಸ್ಯರು ಇದ್ದಾರೆ.

(ಗೊಂದಲ)

ಉಪಾಧ್ಯಕ್ಷರು :- ಈಗ ಮಾನ್ಯ ಸದಸ್ಯರು ಏನು ಹೇಳುತ್ತಾರೆಂಬುದನ್ನು ಕೇಳೋಣ. ಮಾನ್ಯ ರೇಣುಕಾಚಾರ್ಯರವರೆ ತಾವು ಕುಳಿತುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ :- ಮಾನ್ಯ ಉಪಾಧ್ಯಕ್ಷರೆ, ಸದಸ್ಯರು ಮಾತನಾಡಲಿ, ಮಾತನಾಡಬೇಕಾದ ವಿಚಾರವನ್ನು ಅವರು ಪ್ರಸ್ತಾಪ ಮಾಡುವಾಗ ಅತ್ಯಂತ ಸೌಮ್ಯವಾಗಿ ಹೇಳಬಹುದಿತ್ತು, ಹೇಳಬೇಕಾದಂಥ ಮಾತುಗಳಲ್ಲಿ ಹೇಳುವುದನ್ನು ಬಿಟ್ಟು ಈ ರೀತಿ ಮಾತನಾಡಬಾರದು.

ಮಾನ್ಯ ಸದಸ್ಯರು :- ವೈಯಕ್ತಿಕವಾಗಿ ಏನು ಇಲ್ಲ, ನಿಮ್ಮ ಬಗ್ಗೆ ಏನು ಮಾತನಾಡುವುದು?

ಶ್ರೀ ಸಿ.ಎಂ. ಉದಾಸಿ :- ಆ ರೀತಿ ಮಾತನಾಡಬಾರದು.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೆ, ಸಂಪುಟದಲ್ಲಿ ಇದ್ದಂತಹ ಸಚಿವರಲ್ಲಿ ಮಾನ್ಯ ಸಿ.ಎಂ. ಉದಾಸಿಯವರು ಒಬ್ಬರು. ಅವರ ಬಗ್ಗೆ ನಮಗೆ ಹೆಚ್ಚಿನ ಗೌರವ ಕೂಡ ಇದೆ. ಇವತ್ತು ತಮ್ಮ ತಲೆಯ ಮೇಲೆ ಏನು ಹಾಕಿದ್ದಾರೆ, ಬಹಳ ದೊಡ್ಡ ಜವಾಬ್ದಾರಿ ತಮಗೆ ಬಂದಿದೆ. ರಾಜ್ಯಾಂಗಕ್ಕೆ ಕೂಡ 72, 73 ಅಮೆಂಡ್‌ಮೆಂಟ್ ಆದಮೇಲೆ ಮಾನ್ಯ ರಾಜೀವ್ ಗಾಂಧಿಯವರು ಈ ದೇಶದಲ್ಲಿ ಕ್ರಾಂತಿಕಾರಕವಾದಂಥ ಬದಲಾವಣೆಯನ್ನು ಮಾಡಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ, ಪಂಚಾಯತ್‌ನಲ್ಲಿ, ಎಲ್ಲಾ ಕಡೆ ಈ ಶೋಷಿತ ವರ್ಗಕ್ಕೆ, ಹಿಂದುಳಿದವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಮಹಿಳೆಯರಿಗೆ, ಎಲ್ಲಾ ಜನರಿಗೆ ಪ್ರಾತಿನಿಧ್ಯವನ್ನು ಕೊಡುವಂಥಾ ಬಹಳ ಪವಿತ್ರವಾದಂಥ ಒಂದು Act ಈ ದೇಶದಲ್ಲಿ ನಡೆಯುತ್ತಿದೆ. ನಾನು ಮುಖ್ಯಮಂತ್ರಿಯಾದಾಗಲೂ ಕೂಡ, ಇದೆಲ್ಲಾ ಚರ್ಚೆಯಾಯಿತು, ಆಗ ತಾವು ಕೂಡ ಇದ್ದಿರಿ. ಮಾನ್ಯ ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿದ್ದರು. ನಮ್ಮ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಕೂಡ ಇದ್ದರು. ಸಾಕಷ್ಟು ವಿರೋಧ ಪಕ್ಷದ ನಾಯಕರುಗಳು ಕೂಡ ಇದ್ದರು. ನಾವು ಚರ್ಚೆಯಾದ ಮೇಲೆ ಏನು ಮಾಡಿದ್ದೇವೆಂದರೆ, Vigilance Committee ಇವತ್ತು ಶಾಸಕರಿಗೆ ಒಂದು ಕಡೆ ಇದೆ. ಶಾಸಕರು ಜನರ ಪ್ರತಿನಿಧಿಗಳು, ಶಾಸಕರಿಗೂ ಕೂಡ ಆ ಒಂದು ಹಕ್ಕು ಬೇಕಾಗುತ್ತದೆ. ನಮ್ಮ ಪಾತ್ರ ಏನು? ಎನ್ನುವಂಥ ರೀತಿಯಲ್ಲಿ, ಇವತ್ತು ಮೊನ್ನೆ

ಕೂಡ ಮಾನ್ಯ ಮಣಿಶಂಕರ್ ಅಯ್ಯರ್‌ರವರು ಒಂದು ವಿಚಾರ ಸಂಕೀರ್ಣದಲ್ಲಿ ಪಾಲ್ಗೊಂಡಿದ್ದರು. ಆಗ ಮಾನ್ಯ ಮಣಿಶಂಕರ್ ಅಯ್ಯರ್‌ರವರು ಏನು ಹೇಳಿದ್ದಾರೆ. ಈ ನಮ್ಮ ಒಂದು ತಿದ್ದುಪಡಿಗೆ ಏನಾದರೂ ಒಂದು ಧಕ್ಕೆ ಬಂದರೆ ಸಹಿಸುವುದಕ್ಕಾಗುವುದಿಲ್ಲ. ಮಾನ್ಯ ಬಳಿಗಾರ್‌ರವರು Principle Secretary ಯಾಗಿ ಇದ್ದರು. ಅಲ್ಲಿ ಬಹಳಷ್ಟು ರಾಷ್ಟ್ರ ಮಟ್ಟದಲ್ಲಿ ಪ್ರಧಾನ ಮಂತ್ರಿಗಳು, ಮಾನ್ಯ ಮಣಿಶಂಕರ್ ಅಯ್ಯರ್‌ರವರು, ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಜಾರಿಗೆ ತರುವಂಥ ರೀತಿಯಲ್ಲಿ ನಾವು ಮಾಡಿದ್ದೇವೆ. ಇವತ್ತು appropriation ಇದೆ, ಇವತ್ತು ಒಂದು ಕಡೆ ಶಾಸಕರುಗಳಿಗೆ ಆಗುವಂತಹ ಅನ್ಯಾಯ, ಮತ್ತೊಂದು ಕಡೆ ಸಂವಿಧಾನದ ತಿದ್ದುಪಡಿ ಮಾಡಿ, ಮಾನ್ಯ ರಾಜೀವ್ ಗಾಂಧಿಯವರ concept ಏನು ಈ ದೇಶದಲ್ಲಿ ಇತ್ತು. ಪಂಚಾಯತ್ ರಾಜ್ ಅನ್ನು ಇವತ್ತಿನ ದಿವಸ ಅನುಷ್ಠಾನಕ್ಕೆ ತರುವಂಥಾ ನಮ್ಮ ನಿರ್ಧಾರದಲ್ಲಿ ಇವತ್ತು ಏನಾಗಿದೆಯೆಂದರೆ, ಮನೆಗಳನ್ನು ಆಯ್ಕೆ ಮಾಡುವಂಥಾ ರೀತಿಯಲ್ಲಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಿಗೆ ಕೊಟ್ಟರೆ ಸರಿ ಹೋಗುವುದಿಲ್ಲ. ಶಾಸಕರಿಗೆ ಕೊಡಬೇಕೆನ್ನುವ ವಿಚಾರಕ್ಕೆ ನಮ್ಮದು ಏನು ಅಭ್ಯಂತರವಿಲ್ಲ. ಆದರೆ ಮಾನ್ಯ ಮಣಿಶಂಕರ್ ಅಯ್ಯರ್‌ರವರು ಇವತ್ತು ನಮ್ಮ ರಾಷ್ಟ್ರಮಟ್ಟದಲ್ಲಿ ಎಲ್ಲಾ ಕಡೆಯಿಂದ ಈ ರೀತಿಯ ವಿಚಾರಗಳು ಬರುತ್ತಿವೆ. ನಾನು ಮಾನ್ಯ ಉದಾಸಿಯವರಿಗೆ bill ಅನ್ನು defer ಮಾಡಿಯೆಂದು ಹೇಳುತ್ತೇನೆ. ತಾವು ಕೇಂದ್ರಸರ್ಕಾರದೊಂದಿಗೆ ಸಮಾಲೋಚನೆ ಮಾಡಿ, ಒಂದು ವೇಳೆ ಕೇಂದ್ರಸರ್ಕಾರವನ್ನು ಧಿಕ್ಕರಿಸಿ ಇವತ್ತು bill ಅನ್ನು pass ಮಾಡಿದರೆ ನಾಳೆ ದಿವಸ ಕೇಂದ್ರ ಸರ್ಕಾರದಿಂದ ಏನು ಅನುದಾನ ಬರುತ್ತಿದೆ, ಅದಕ್ಕೂ ಅಡ್ಡ ಬರುತ್ತದೆ. ಈ ವಿಚಾರ ಅವರಿಗೂ ಗೊತ್ತಿದೆ. ಅವರಿಗೂ ಕೂಡ ಶಾಸಕರ ಒತ್ತಡವಿದೆ. ನಾವು ಆ ಕಾಲದಲ್ಲಿ ಮಧ್ಯದಲ್ಲಿ ಏನು ಮಾಡಿದ್ದೇವೆಂದರೆ, in between Vigilance Committee ಶಾಸಕರು ಅದರ ಮೇಲೆ ನಿಗಾ ವಹಿಸಿ, ಅದರ ಬಗ್ಗೆ ನೋಡಬೇಕೆಂಬ ರೀತಿಯಲ್ಲಿ ಮಾಡಿದ್ದೇವೆ. ಇದು ಬಹಳಷ್ಟು ಸೂಕ್ಷ್ಮವಾದ ವಿಚಾರ. ಇವತ್ತು ಮಾನ್ಯ ರಾಜೀವ್ ಗಾಂಧಿಯವರು ಕಷ್ಟ ಪಟ್ಟು ಇಡೀ ರಾಷ್ಟ್ರದಲ್ಲಿ ಮುನಿಸಿಪಾಲಿಗಳಲ್ಲಿ, ಗ್ರಾಮಪಂಚಾಯತ್‌ಗಳಲ್ಲಿ, ತಾಲ್ಲೂಕು ಪಂಚಾಯತ್‌ಗಳಲ್ಲಿ ಎಲ್ಲಾ ಏನು concept ತಂದಿದ್ದಾರೆ, ಅದನ್ನು ಇವತ್ತಿನ ದಿವಸ ನಾವು ಹಾಳು ಮಾಡಬಾರದು. ಅದನ್ನು ಹಾಳು ಮಾಡದ ರೀತಿಯಲ್ಲಿ ಒಂದು ಕಡೆ ಶಾಸಕರಿಗೆ ಹಕ್ಕನ್ನು ಕೂಡಲೇ ಬೇಕು. They are public representatives, ಮತ್ತೊಂದು

ಕಡೆ ಸಂವಿಧಾನ ತಿದ್ದುಪಡಿ ಮಾಡಿ, ಎರಡರ ಮಧ್ಯದಲ್ಲಿ ಬರುವಂಥ ರೀತಿಯಲ್ಲಿ via media ನೋಡಬೇಕು. ಇವತ್ತು ಬಹುಮತವಿದೆಯೆಂದು ಹೇಳಿ ಕೈ ಎತ್ತಿ bill pass ಮಾಡಿದರೆ, ಬರತಕ್ಕಂಥಾ ಕಷ್ಟಗಳು ಏನು ಇವೆ, ಅದರ ಬಗ್ಗೆಯೂ ಕೂಡ You have to anticipate. You have to face all the consequences... ಅದರ ಬಗ್ಗೆ ತಾವು ವಿಚಾರ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು :– ಮಾನ್ಯ ಪಿ.ಜಿ.ಆರ್. ಸಿಂಧ್ಯರವರೆ, ಮಾತನಾಡಿ. ಮಾನ್ಯ ಎಂ.ಪಿ. ವೆಂಕಟೇಶ್‌ರವರೆ ಕುಳಿತುಕೊಳ್ಳಿ. ಈ ವಿಷಯ ನಿಮ್ಮದಲ್ಲ. ಮಾನ್ಯ ರೇಣುಕಾಚಾರ್ಯರವರೆ, ನಾನು ಮಾನ್ಯ ಸಿಂಧ್ಯರವರನ್ನು ಕರೆದಿದ್ದೇನೆ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಮಾನ್ಯ ಸಿಂಧ್ಯರವರೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :– ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಮಂಡಿಸಬೇಕೆನ್ನುವ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಸುತ್ತೇನೆ. 1983 ನೇ ಇಸವಿಯಲ್ಲಿ ನಮ್ಮ ಶಾಸಕರುಗಳಲ್ಲಿ ನಾನು ರಾಜಕೀಯವನ್ನು ಬೆರೆಸದೇ, ನಾವೆಲ್ಲಾ ರಾಜಕೀಯ ಪಕ್ಷಗಳಿಂದಲೇ ಗೆದ್ದು ಬರುವಂಥಾದ್ದು. ರಾಜಕೀಯ ಪಕ್ಷಗಳ ಆಧಾರದ ಮೇಲೆಯೇ ನಾವು ಇಲ್ಲಿ ಪ್ರತಿನಿಧಿಸುವುದು. ಅದುದರಿಂದ ನಾನು ರಾಜಕೀಯವನ್ನು ಬೆರೆಸದೇ ಇಲ್ಲಿ ಎರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ನಿಮಗೆ ನಾನು ಹೇಳುವ ಮಾತುಗಳು ಹಿಡಿಸಿದರೆ ನಿಮ್ಮ ಮನಸ್ಸಿಗೆ ತೆಗೆದುಕೊಳ್ಳಿ, ಹಿಡಿಸದೇ ಹೋದರೆ ಬಿಡಿ. ಇದರಲ್ಲಿ ಏನು ವೈಯಕ್ತಿಕವಾದ ಪ್ರತಿಷ್ಠೆಯನ್ನಾಗಿ ಯಾರು ಸಹಿತ ತೆಗೆದುಕೊಳ್ಳಬಾರದೆಂದು ಮನವಿಯನ್ನು ಮಾಡಿ, ಇಲ್ಲಿಗೆ ಹೊಸದಾಗಿ ಬಂದಿರುವ ಸದಸ್ಯರು ದಯಮಾಡಿ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಾನು ನಿಮ್ಮನ್ನು ಟೀಕೆ ಮಾಡಬೇಕು, ಅಥವಾ ಬೇರೆ ಯಾರನ್ನೋ ಟೀಕೆ ಮಾಡಬೇಕೆನ್ನುವ ಉದ್ದೇಶದಿಂದ ನಾನು ಈ ಮಾತನ್ನು ಹೇಳಿಲ್ಲ. ನನ್ನ ಅನುಭವಗಳನ್ನು ಹೇಳುವುದಕ್ಕೆ ಇಚ್ಛೆಸುತ್ತೇನೆ.

1983 ನೇ ಇಸವಿಯುಲ್ಲಿ ನಾನು ಶಾಸಕನಾಗಿದ್ದೆ. ಆಗ ಜಿಲ್ಲಾ ಬೋರ್ಡುಗಳಿರಲಿಲ್ಲ, ತಾಲ್ಲೂಕು ಬೋರ್ಡ್‌ಗಳು ಮಾತ್ರ ಇದ್ದುದು. ಗ್ರಾಮ

ಪಂಚಾಯಿತಿಗಳು ಇದ್ದವು. ಆಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ನಜೀರ್ ಸಾಹೇಬರು ಇವರೆಲ್ಲಾ ಸೇರಿಕೊಂಡು ನಮ್ಮ ರಾಜ್ಯದಲ್ಲಿ ಗ್ರಾಮಪಂಚಾಯಿತಿಯ ಕಾನೂನನ್ನು ತರಬೇಕು ಎಂದು ಹೇಳಿದಾಗ, ನಾನು ಮತ್ತು ನಮ್ಮಲ್ಲಿದ್ದಂಥ ಅನೇಕ ಜನ ಅದನ್ನು ವಿರೋಧ ಮಾಡಿದೆವು. ಆಗ ಹೆಗಡೆಯವರು ಏನು ಹೇಳಿದರು ಎಂದರೆ, ವಿಶೇಷವಾಗಿ ನನಗೆ ಏನು ಹೇಳಿದರು ಎಂದರೆ, "ನಿನ್ನನ್ನು ನೋಡಿದರೆ ಏಕೋ ಒಂದು ರೀತಿಯ ಪಾಳೆಗಾರಿಕೆಯ ಪ್ರವೃತ್ತಿ ಕಾಣುತ್ತಿದೆ, ಈ ಪಾಳೆಗಾರಿಕೆಯ ಪ್ರವೃತ್ತಿಯನ್ನು ನೀನು ಬಿಡಬೇಕು, ವಿಷಯಗಳನ್ನು ತಿಳಿದುಕೊಳ್ಳಲಿಕ್ಕೆ ನೀನು ಪ್ರಯತ್ನ ಮಾಡು" ಎನ್ನತಕ್ಕಂಥ ಮಾತನ್ನು ಹೇಳಿದರು. ಅವರು ಹೇಳಿದುದನ್ನು ಜ್ಞಾಪಿಸಿಕೊಳ್ಳಲಿಕ್ಕೆ ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ. ನಾನು ಕ್ಷತ್ರಿಯ ಎಂದು ಆ ರೀತಿ ಹೇಳಿರಬಹುದು, ಇಲ್ಲ ಎಂದು ನಾನು ಅದನ್ನು ಅಲ್ಲಗೆಳೆಯಲು ಹೋಗುವುದಿಲ್ಲ. ನಾನು ಕ್ಷತ್ರಿಯನಾಗಿ ಹುಟ್ಟಬೇಕು ಎಂದು ಅರ್ಜಿಯನ್ನು ಹಾಕಿರಲಿಲ್ಲ. ನಾನು ರಾಯ ಆಗಿ, ಕ್ಷತ್ರಿಯನಾಗಿ ಹುಟ್ಟಿಬಿಟ್ಟಿದ್ದೇನೆ. ಆ ರೀತಿ ಹಿಂದುಗಡೆ ಕರೆದರೆ ಏನು ಮಾಡುವುದಕ್ಕಾಗುತ್ತದೆ? ಸಿದ್ಧರಾಮಯ್ಯನವರು ಮುಂದುಗಡೆ ಹೇಳುತ್ತಿದ್ದಾರೆ. I appreciate that. ಆ ವಿಷಯ ಬೇಡ ಈಗ. ಹೆಗಡೆಯವರು ಹೇಳಿದುದನ್ನು ನಾನು ಜ್ಞಾಪಿಸಿಕೊಳ್ಳುತ್ತೇನೆ. ಹೆಗಡೆಯವರು ಏನು ಹೇಳಿದರು ಎಂದರೆ " ಸಿಂಧ್ಯಾರವರೇ, ದಯವಿಟ್ಟು ನೀವು ಸ್ವಲ್ಪ ಯೋಚನೆ ಮಾಡಿ, ನೀವು ಮಾಡುತ್ತಿರುವುದು ಸರಿಯಲ್ಲ" ಎಂದು ಹೇಳಿದರು. ನಾನುಈಗ ಹೆಸರುಗಳನ್ನು ಹೇಳಿದರೆ ರಾಜಕೀಯ ಬೆರೆಸಿದ ಹಾಗಾಗುತ್ತದೆ. ಆದ್ದರಿಂದ ನಾನು ಹೆಸರುಗಳನ್ನು ಬಳಸುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿಯ ಅನೇಕ ಜನರಿಗೆ, "ನೀವೆಲ್ಲ ಪಾಳೆಗಾರಿಕೆಯ ಪ್ರವೃತ್ತಿಯನ್ನಿಟ್ಟುಕೊಂಡಿದ್ದೀರಿ" ಎಂದು ಹೇಳಿದರು. ನಾವು ಏನೊಂದು ಪ್ರಶ್ನೆಯನ್ನು ಎತ್ತಿದೆವು ಎಂದರೆ, ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳಿಗೆ ನಾವು ಇಷ್ಟೊಂದು ಅಧಿಕಾರವನ್ನು ಕೊಟ್ಟುಬಿಟ್ಟರೆ, ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ವರ್ಗದವರಿಗೆ ಇವರು ನ್ಯಾಯ ಒದಗಿಸಲು ಆಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳಿಗೆ ಇಷ್ಟೊಂದು ಅಧಿಕಾರವನ್ನು ಕೊಡುವುದು ಸೂಕ್ತವಲ್ಲ ಎನ್ನತಕ್ಕಂಥ ಮಾತನ್ನು ಹೇಳಿದೆವು. ಆಗ ರೇಣುಕಾಚಾರ್ಯರವರು ಪ್ರಧಾನರಾಗಿದ್ದರೋ, ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದರೋ ನನಗೆ ಗೊತ್ತಿಲ್ಲ. 1983–85 ರಲ್ಲಿನ ಸಂದರ್ಭದಲ್ಲಿದ್ದಂಥಾದ್ದನ್ನು ನಾನು ಹೇಳುತ್ತಿದ್ದೇನೆ. ಆಗ ಪ್ರಧಾನರಿಗೆ ಹೆಚ್ಚಿನ ಒಂದು ಪ್ರಾಧಾನ್ಯತೆ ಇತ್ತು.

ಆಗ ಪ್ರಧಾನರು ಎಂದರೆ ಬಹಳ ಹೆಚ್ಚಿನ ಒಂದು ಶಕ್ತಿ ಇತ್ತು. ಇವತ್ತು ಅಷ್ಟೊಂದು ಶಕ್ತಿಯನ್ನು ನಾವು ಅಧ್ಯಕ್ಷರುಗಳಿಗೆ ಕೊಟ್ಟಿಲ್ಲ. ವಾಸ್ತವಾಂಶವನ್ನು ಮಾತನಾಡೋಣ. ಆಗ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಎಂದರೆ ಎಲ್ಲ ಕಾರ್ಯಕ್ರಮಗಳನ್ನು ಮಾಡಲು ಆಗುತ್ತಿತ್ತು, ಮುಖ್ಯಮಂತ್ರಿಗಳ ರೀತಿಯಲ್ಲಿ ಕೆಲಸವಾಗುತ್ತಿತ್ತು. ಸಾಮರಸ್ಯವೂ ಸಹಾ ಇತ್ತು. ಗ್ರಾಮ ಪಂಚಾಯಿತಿಯ ಪ್ರಧಾನರು, ಅದಾದ ಮೇಲೆ ಜಿಲ್ಲಾ ಪಂಚಾಯಿತಿ ಇತ್ತು. ತಾಲ್ಲೂಕು ಪಂಚಾಯಿತಿಗೆ ಹೆಚ್ಚಿನ ಅಧಿಕಾರ ಇರಲಿಲ್ಲ. ತಮಗೆ ಜ್ಞಾಪಕವಿರಬಹುದು, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ದೊಡ್ಡ ಸಮಾವೇಶವನ್ನು ಮಾಡಲು, ಸುಮಾರು ಒಂದು ಲಕ್ಷ ಚುನಾಯಿತ ಪ್ರತಿನಿಧಿಗಳನ್ನು ಅರಮನೆ ಮೈದಾನದಲ್ಲಿ ಸೇರಿಸಿ, ಅದಕ್ಕೆ ಅವತ್ತಿನ ಪ್ರಧಾನಿಗಳನ್ನೇ ಕರೆಸಬೇಕೆಂದು ಹೇಳಿ ಪತ್ರ ಬರೆದರು. ಆಗ ಪ್ರಧಾನಿಗಳು, "ನಾನು ಬರುವುದಕ್ಕಾಗುವುದಿಲ್ಲ, ಮಾನವ ಸಂಪನ್ಮೂಲ ಮಂತ್ರಿಗಳಾಗಿರತಕ್ಕಂಥ ನರಸಿಂಹರಾಯರನ್ನು ಕಳುಹಿಸುತ್ತೇನೆ" ಎಂದು ಹೇಳಿದರು. ಅದರಂತೆ ನರಸಿಂಹರಾಯರು ಬಂದರು, ಭಾಷಣವಾಯಿತು. ಅದರ ಬಗ್ಗೆ , ಆಗ ಪ್ರಧಾನ ಮಂತ್ರಿಗಳಾಗಿದ್ದಂಥ ಶ್ರೀಮಾನ್ ರಾಜೀವ್ ಗಾಂಧಿಯವರಿಗೆ, ವಿಶೇಷವಾಗಿರತಕ್ಕಂಥ ಈ ಒಂದು ಪ್ರಯತ್ನ ಕರ್ನಾಟಕದಲ್ಲಿ ಯಶಸ್ವಿಯಾಗುತ್ತದೆ ಎಂದು ಮನವರಿಕೆಯಾದ ಮೇಲೆ, ಅದನ್ನು ಇಡೀ ದೇಶದಲ್ಲೇ ತರಬೇಕು ಎಂಧು ಅವರು ಸಂವಿಧಾನದಲ್ಲಿ ಬದಲಾವಣೆಯನ್ನು ಮಾಡಿ ಇವತ್ತು ಈ ಕಾನೂನನ್ನು ಮಾಡಿದ್ದಾರೆ. ಲೋಕಸಭಾ ಸದಸ್ಯರುಗಳೇ Area Development Fund ಎಂದು ಮಾಡಿಕೊಂಡಿದ್ದಾರೆ. ಅದನ್ನು ಮಾಡಿಕೊಂಡು, ಅವರ ಮನಸೋ ಇಚ್ಛೆ ಅವರ ಕ್ಷೇತ್ರದಲ್ಲಿ ಖರ್ಚು ಮಾಡುತ್ತಿದ್ದಾರೆ. ಅಲ್ಲಿನ ಎಂ.ಎಲ್.ಎ ಅವರ ಪರವಾಗಿದ್ದರೆ ಪರವಾಗಿಲ್ಲ, ಅವರ ವಿರುದ್ಧವಾಗಿರತಕ್ಕಂಥವರಿಗೆ ದುಡ್ಡು ಕೊಡದೇ ಇರತಕ್ಕಂಥ ಪ್ರವೃತ್ತಿಯನ್ನು ನಾವು ಗಮನಿಸುತ್ತಿದ್ದೇವೆ. ಅಂದರೆ Planning Commission ಏಕಿರಬೇಕು, planning ಏಕಿರಬೇಕು. ಒಟ್ಟು 600 ಜನ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳು ಎಂದರೆ, 600 x 2 ಕೋಟಿ ಎಂದರೆ ಸುಮಾರು 1,200 ಕೋಟಿ ಅಥವಾ 1,400 ಕೋಟಿ ರೂಪಾಯಿಗಳ non-plan expenditure ಅನ್ನು ಎಲ್ಲೋ ಒಂದು ಕಡೆ ತೆಗೆದುಕೊಂಡು ಬರುತ್ತಾರೆ, ಅದು ಯಾವುದೋ ರೀತಿಯಲ್ಲಿ ಖರ್ಚಾಗುತ್ತದೆ. ಅದೇ ರೀತಿನಾವು ಸಹ ಹಠ ಹಿಡಿದುಕೊಂಡು, ನಮಗೇನೂ ಗೌರವವಿಲ್ಲ, ನಾವು ಹೇಳಿದ ಕಡೆ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ, ನಾವು ಬಹಳ ಪ್ರವಾಸ ಮಾಡುತ್ತೇವೆ ಎನ್ನುವ

ದೃಷ್ಟಿಯನ್ನಿಟ್ಟುಕೊಂಡು, ನಾವೆಲ್ಲರೂ ಸಹ ನಮಗೂ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿ, ಸಿದ್ಧರಾಮಯ್ಯನವರಿದ್ದಾಗ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಈಗ ಅದನ್ನು ಒಂದು ಕೋಟಿಯನ್ನೋ, ಎರಡು ಕೋಟಿಯನ್ನೋ ಶ್ರೀಮಾನ್ ಯಡಿಯೂರಪ್ಪನವರು ಮತ್ತು ಕುಮಾರಸ್ವಾಮಿಯವರು ಮಾಡಿದ್ದಾರೆ. ಅದು ಬಹಳ ಸಂತೋಷದ ವಿಚಾರವೇ. ಆದರೆ ವಸ್ತುಸ್ಥಿತಿಯನ್ನು ನಾವೆಲ್ಲ ಯೋಚನೆ ಮಾಡೋಣ. ಈಗ ನಾವು ಹಳ್ಳಿಗಳಲ್ಲಿ ಗ್ರಾಮಸಭೆಗಳನ್ನು ಮಾಡುವುದಕ್ಕಾಗುವುದಿಲ್ಲ. ಗ್ರಾಮಸಭೆಗಳನ್ನು ಮಾಡಿದರೆ, ನಾವು ಕೊಡುವ 300–400 ಮನೆಗಳಿಗಾಗಿ ಹೊಡೆದಾಟವಾಗುತ್ತದೆ. ಯಾವುದೇ beneficiary ಯನ್ನು select ಮಾಡುವುದಕ್ಕಾಗುವುದಿಲ್ಲ. ಹಸಿರು ಕಾರ್ಡುಗಳ ವಿಚಾರದಲ್ಲಿ, ಗ್ರಾಮಸಭೆಗಳ ಮೂಲಕ ಹಸಿರು ಕಾರ್ಡುಗಳನ್ನು ಮಾಡುವುದಕ್ಕಾಗುತ್ತದೆಯೇ, ಹಂಚುವುದಕ್ಕಾಗುತ್ತದೆಂಯೇ, beneficiary ಯನ್ನು find out ಮಾಡುವುದಕ್ಕಾಗುತ್ತದೆಯೇ? ಅದು ಆಗುತ್ತಿಲ್ಲ. In fact, I appreciate Deputy Chief Minister, Mr Yediyurappa. ಅವರು ಏನು ಹೇಳಿದ್ದಾರೆ ಎಂದರೆ, ರೇಷನ್ನಿಗೆ ಬಿಟ್ಟು ಬಾಕಿ ಯಾವುದಕ್ಕೂ ಈ ಕಾರ್ಡ್‌ನ್ನು ಉಪಯೋಗಿಸದೇ ಇರತಕ್ಕಂಥ ಒಂದು ಕಾನೂನನ್ನು ಏಪ್ರಿಲ್ 1 ನೇ ತಾರೀಖು ಆದಮೇಲೆ ಮಾಡುತ್ತೇನೆ ಎಂದು ಹೇಳಿದ್ದಾರೆ. I appreciate that. ಅದು ಬೇಗ ಆಗಬೇಕು ಎನ್ನುವುದು ನನ್ನ ಇಚ್ಛೆ. ಆದರೆ ಎಂ.ಎಲ್.ಎ ಗಳಾದ ನಾವು ಅಲ್ಲಿಯ beneficiaries ಅನ್ನು select ಮಾಡತಕ್ಕಂಥಾದ್ದು ಎಷ್ಟೊಂದು ಸೂಕ್ತ ಎನ್ನುವುದನ್ನು ಈ ಸಂದರ್ಭದಲ್ಲಿ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ನನ್ನದೇ ಉದಾಹರಣೆಯಾಗಿ ಹೇಳುತ್ತೇನೆ. ಯಾರು ಪಟ್ಟಿಯನ್ನು ತಂದು ಕೊಡುತ್ತಾರೆ, ಆ ಪಟ್ಟಿಯ ಆಧಾರದ ಮೇಲೆ ನಾವು select ಮಾಡುತ್ತೇವೆ. ನಮ್ಮ ಕ್ಷೇತ್ರದಲ್ಲಿರತಕ್ಕಂಥ ಎಲ್ಲ 365 ಹಳ್ಳಿಗಳಿಗೆ ಹೋಗಿ ಅವರು ಕೊಡತಕ್ಕಂಥ ಹೆಸರುಗಳನ್ನು ತೆಗೆದುಕೊಂಡು ಅದರಲ್ಲಿ ಯಾರು eligible ಇದ್ದಾರೆ, ಯಾರು ineligible ಇದ್ದಾರೆ ಎನ್ನುವುದನ್ನು ನೋಡಿ ಸೆಲೆಕ್ಟ್ ಮಾಡುವುದಕ್ಕಾಗುವುದಿಲ್ಲ. ನನಗೆ ಯಾರು ಬೇಕೋ ಅವರನ್ನು, ನನಗೆ ಬೇಕಾಗಿರುವವರ ಕಡೆಯಿಂದ list ತೆಗೆದುಕೊಂಡು ಕೊಡುತ್ತೇನೆ, ಅವರೇ ಸರಿ ಎಂದು ಹೇಳುತ್ತೇನೆ. ಆಶ್ರಯ ಮನೆಗಳ ಆಯ್ಕೆ ಪರಿಸ್ಥಿತಿ ಏನು ಎನ್ನುವುದು ನಮಗೆ ಗೊತ್ತಿದೆ. I.P. set ಮನೆಗಳನ್ನು ಕಟ್ಟಿಸಿಕೊಳ್ಳಬೇಕಾದರೆ ಬಿಲ್ ಮಾಡಿಕೊಳ್ಳಬೇಕು. ನಾನು 40 ವರ್ಷದಿಂದ ಕಾರ್ಯಕರ್ತನಾಗಿ ದುಡಿದಿದ್ದೇನೆ,

ನನಗೆ ಮನೆಯಿಲ್ಲ ಎಂದರೆ ಹೇಗೆ ಎಂದು ಕೇಳುತ್ತಾರೆ. ನಮ್ಮ ಕಡೆ ಪಡಸಾಲೆಗಳು ಎಂದು ಹೇಳುತ್ತೇವೆ, ಒಪ್ಪಾರ ಎಂದು ಹೇಳುತ್ತೇವೆ. ಒಪ್ಪಾರ ಕಟ್ಟಿಸಿಕೊಂಡಿರುವವನಿಗೂ ಮನೆಗಳು ಸಿಕ್ಕಿವೆ. ಲೆಕ್ಕ ಹಾಕಿ ನೋಡಿ. 1969–70 ರಲ್ಲಿ ದೇವರಾಜ ಅರಸೂರವರು ಮುಖ್ಯಮಂತ್ರಿಗಳಾಗಿದ್ದಾಗ 3 ಸಾವಿರ ರೂಪಾಯಿಗಳನ್ನು ಕೊಟ್ಟು ಜನತಾ ಮನೆಗಳನ್ನು ಕಟ್ಟುವ ಈ ಒಂದು ಯೋಜನೆಯನ್ನು ವಾಪಸ್ಸು ತೆಗೆದುಕೊಂಡು ಬಂದರು. ಇದುವರೆಗೂ ನಾವು ಕರ್ನಾಟಕದಲ್ಲಿ ಸುಮಾರು ಒಂದೂವರೆ ಕೋಟಿ ಮನೆಗಳನ್ನು ಕಟ್ಟಿದ್ದೇವೆ. 1970 ನೇ ಇಸವಿಯಿಂದ ಇದುವರೆಗೂ ನಾವು ನಿಜವಾಗಿಯೂ ಸಹ ಒಂದೂವರೆ ಕೋಟಿ ಮನೆಗಳನ್ನು ಕಟ್ಟಿದ್ದರೆ, there should be no man without site ಎಲ್ಲರಿಗೂ ಸೈಟು ಇರಬೇಕಾಗಿತ್ತು. ಎಲ್ಲರಿಗೂ ಮನೆ ಇರಬೇಕಾಗಿತ್ತು. ಆದರೆ ಅದು ಆಗಿಲ್ಲ. ಹಾಗಾದರೆ ಈ ದುಡ್ಡು ಎಲ್ಲಿ ಹೋಗುತ್ತಿದೆ? ಆದ್ದರಿಂದ, ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಿಜ, ಶಾಸಕರಿಗೆ ಮಾನ್ಯತೆ ಬರುವ ರೀತಿಯಲ್ಲಿ ಆಗಬೇಕು. ಗ್ರಾಮ ಪಂಚಾಯಿತಿಯ ಸಭೆಗಳಿಗೆ ನಾವು ಹೋಗಬಹುದು ಎಂದು Act ನಲ್ಲಿ provision ಇದೆ. ಗ್ರಾಮ ಪಂಚಾಯಿತಿಯ Action Plan ನಲ್ಲಿ ನಾವು participate ಮಾಡಬಹುದು. ನಮಗೆ ಅಷ್ಟೊಂದು time ಇದೆಯೇ? Legislature Committee ಗಳಿಗೆ ನಾವು ಬರುವುದಕ್ಕಾಗುವುದಿಲ್ಲ. ಇನ್ನು ಗ್ರಾಮ ಪಂಚಾಯಿತಿಯ ಸಭೆಗಳಿಗೆ ಎಲ್ಲಿ ಹೋಗುವುದಕ್ಕಾಗುತ್ತದೆ? ಈಗ ಭಾಗ್ಯಜ್ಯೋತಿ ಯೋಜನೆ ಇಲ್ಲದೇ ಇರುವುದರಿಂದ, I.R.D. P ಸಾಲ ಕೊಡತಕ್ಕಂಥ, ಆಶ್ರಯ ಮನೆ ಕೊಡತಕ್ಕಂಥ ವಿಚಾರದಲ್ಲಿ ಗ್ರಾಮ ಪಂಚಾಯಿತಿ Action plan ಮಾಡುವುದರ ಬಗ್ಗೆ ಒಂದು alternative system ಮಾಡೋಣ. ಇದನ್ನು ನಾನು planning Minister ಆಗಿದ್ದಾಗ suggest ಮಾಡಿದ್ದೆ. ಸಿದ್ಧರಾಮಯ್ಯನವರು ಅದನ್ನು ಮಾಡಿ ಹೋಗಿದ್ದರು. Mr Baligar was Rural Development Commissioner ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಸಹ ನೀವು mapping ಮಾಡಿ, ಒಂದು Action plan ಮಾಡಿ. ಪಂಚವಾರ್ಷಿಕ ಯೋಜನೆಗಳಿಗೆ ಯಾವ ರೀತಿ ಮಾಡುತ್ತೇವೆ, ಇಡೀ ದೇಶಕ್ಕೆ ಮತ್ತು ರಾಜ್ಯಕ್ಕೆ, ಅದೇ ರೀತಿಯಲ್ಲಿ ಒಂದೊಂದು ಗ್ರಾಮ ಪಂಚಾಯಿತಗೂ ಸಹ ನಾವು ಒಂದೊಂದು Action plan ಅನ್ನು ಮಾಡೋಣ. ಮತ್ತು ಅಲ್ಲಿರತಕ್ಕಂಥ ವಿಚಾರಗಳ ಬಗ್ಗೆ mapping ಮಾಡೋಣ. ಆಗ overlap ಆಗುವುದಿಲ್ಲ. ಈಗ ಏನಾಗುತ್ತಿದೆ ಎಂದರೆ more than anything else. This

is a political conflict. ಬೇರೆ ಇನ್ನೇನೂ ಇಲ್ಲ. ಆದ್ದರಿಂದ ನಾನು ದಯಮಾಡಿ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇದನ್ನು ಮಾಡತಕ್ಕಂಥಾದ್ದು ಸರಿಯಲ್ಲ. ಇದು ನನ್ನ ಅನುಭವದಿಂದ ಹೇಳುತ್ತಿರತಕ್ಕಂಥ ಮಾತು. ಇದನ್ನು ಮಾಡುವುದರಿಂದ ನಿಮಗೆ ಶತ್ರುಗಳು ಜಾಸ್ತಿಯಾಗುತ್ತಾರೆ. ಯಾರಾದರೂ ನನ್ನನ್ನು, " ನೀನು ಹೇಗೆ ಆರು ಸಾರಿ ಗೆದ್ದು ಬಂದೆ, ಅದರ secret ಏನು" ಎಂದು ಕೇಳಿದರೆ, ಅದಕ್ಕೆ ಉತ್ತರ, " ನಾನು ಇಂಥಾದ್ದರಲ್ಲಿ interfere ಆಗದಿರುವುದರಿಂದಲೇ ಅಷ್ಟು ಸಲ ಗೆದ್ದು ಬಂದಿರುವುದು," ಎಂದು ಹೇಳುತ್ತೇನೆ. Under what Chemistry ನಾನು ಗೆಲ್ಲುತ್ತೇನೆ ಎನ್ನುವುದು ನಿಮ್ಮೆಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಆದ್ದರಿಂದ ನಾನು ನಿಮ್ಮ ಮೂಲಕ appeal ಮಾಡುತ್ತಿದ್ದೇನೆ, this is a transition period. ಇನ್ನೂ 8–10 ವರ್ಷ ಆಗಲಿ. ಅದಾದ ಮೇಲೆ ಬೇಕಾದರೆ ಇನ್ನೂ ಒಂದಷ್ಟು ಮಾಡಿಕೊಳ್ಳೋಣ. I think we should allow at this stage ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಅಧ್ಯಕ್ಷರೆ, ಈ ಬಿಲ್ ನ ವ್ಯಾಪ್ತಿಯನ್ನು ನಾವು ಅವಲೋಕನ ಮಾಡಬೇಕಾಗುತ್ತದೆ. ಇವತ್ತೂ ಕೂಡ ಈ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಮನೆಗಳನ್ನು ಕೊಡುವ ಅಧಿಕಾರವನ್ನು ಕಾಯಿದೆಯಲ್ಲಿ ತಾವು ಕೊಟ್ಟಿಲ್ಲ. ಇವತ್ತಿಗೂ ಕೊಟ್ಟಿಲ್ಲ. ಇವತ್ತಿಗೂ ಇರುವುದೇನೆಂದರೆ, ಗ್ರಾಮ ಸಭೆಯಲ್ಲಿ ಏನಾಗುತ್ತದೋ ಅದು final ಆಗುತ್ತದೆ, ಅದನ್ನು change ಮಾಡುವ ಅಧಿಕಾರ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಇಲ್ಲ ಅಥವಾ ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ, ಮನೆಯನ್ನು ಯಾರಿಗೆ ಕೊಡಬೇಕು ಎನ್ನುವುದನ್ನು ತೀರ್ಮಾನ ಮಾಡುವ ಅಧಿಕಾರವನ್ನು ಅವರಿಗೆ ಕೊಡಲಿಲ್ಲ. ಈ ಮಧ್ಯೆ ನಮ್ಮನ್ನು Vigilance Committee ಎಂದು appoint ಮಾಡಿಬಿಟ್ಟಿರಿ. ಹಾಗೆ ನಮ್ಮನ್ನು appoint ಮಾಡಿದಾಗ ನಮಗೆ ನೂರಾರು ದೂರುಗಳು ಬಂದವು. ಗ್ರಾಮಸಭೆಯಲ್ಲಿ man over ಮಾಡುತ್ತಿದ್ದಾರೆ, ದಬ್ಬಾಳಿಕೆಯಾಗುತ್ತಿದೆ, 2003 ನೇ ಇಸವಿಯ ಫಲಾನುಭವಿಗಳ list ನಲ್ಲೇ ಆಯ್ಕೆ ಮಾಡಬೇಕು ಎಂದು ನೀವೇನು circular ಕೊಟ್ಟಿರಿ, ಆ list ಅನ್ನು open ಮಾಡಲಿಕ್ಕೆ ಬಿಡುತ್ತಿಲ್ಲ, ಪ್ರಭಾವ ಇರುವವರು ಬಂದು ಜಗಳ ಮಾಡಿ ಅಥವಾ ದಬಾವಣೆ ಮಾಡಿ ಮನೆಗಳನ್ನು ಬರೆಸಿಕೊಂಡು

ಹೋಗುತ್ತಿದ್ದಾರೆ, ಇಂಥವರನ್ನು ತಡೆಯಿರಿ ಎಂದು ಹೇಳಿ ಶಕ್ತಿಯಿಲ್ಲದವರು ಅರ್ಜಿ ಕೊಟ್ಟು ನಮಗೆ ಮಾಡುವ ಸ್ಥಿತಿ ನಮ್ಮ ಮುಂಚೆ ಬಂತು. ಇದರಿಂದ ನಾವು ಗ್ರಾಮ ಪಂಚಾಯಿತಿಯ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದೇವೆ ಎನ್ನುವ ಭಾವನೆ ಯಾರಿಗಾದರೂ ಇದ್ದರೆ ಅದು ತಪ್ಪು. ಇದಕ್ಕೆ ಗ್ರಾಮ ಪಂಚಾಯಿತಿಯ resolution ಆಗುವುದಿಲ್ಲ. ಮನೆ ಕೊಡುವ ಕಾರ್ಯಕ್ರಮ ಗ್ರಾಮ ಪಂಚಾಯಿತಿಗಳಿಗೆ ಸೇರಿಲ್ಲ. ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಗ್ರಾಮಸಭೆಯಾಗುತ್ತದೆ ಅಷ್ಟೇ. ಅವರು ಇಲ್ಲ ಎಂದ ಕಡೆ ಒಬ್ಬ Member ಅಲ್ಲಿ ಕುಳಿತುಕೊಂಡು ಅದನ್ನು ಮಾಡುತ್ತಾನೆ. ಸನ್ಮಾನ್ಯ ಸಿಂಧ್ಯಾರವರೇ, ನಾನೂ ಸಹ practical ಆಗಿ ಯೋಚನೆ ಮಾಡಿಯೇ ಮಾತನಾಡುತ್ತಿದ್ದೇನೆ. ನಾನೂ ಸಹ Z.P. Member ಆಗಿಯೇ ರಾಜಕೀಯಕ್ಕೆ ಬಂದವನು. ಕೊಡಬಾರದು ಎನ್ನುವುದನ್ನು ಅರ್ಜಿ ಕೊಟ್ಟ ಮೇಲೆ ನಮ್ಮ ಗಮನಕ್ಕೆ ತಂದುಬಿಡುತ್ತಾರೆ. ಕಳೆದ ವರ್ಷ ನನ್ನ ಕ್ಷೇತ್ರದಲ್ಲಿ ಸುಮಾರು 100 ಚಿಲ್ಲರೆ ಮನೆ ಅರ್ಹತೆ ಇಲ್ಲದವರಿಗೆ ಕೊಟ್ಟಿದ್ದೀರಿ ಎಂದು Vigilance Committee ಮುಂದೆ ಬಂತು. ಅದನ್ನು ತಾವು cancel ಮಾಡುವುದು ಬಿಟ್ಟರೆ, ಮತ್ತೊಂದು ಮನೆಯನ್ನು ಕೊಡುವ ಅಧಿಕಾರವನ್ನು ನಿಮ್ಮ ಶಾಸನ ನಮಗೆ ಕೊಡಲಿಲ್ಲ. ಅಷ್ಟು ಮನೆ ನನ್ನ constituency ಗೆ ಬರುವುದನ್ನು cancel ಮಾಡುವಾಗ ಅನರ್ಹರಿಗೆ ಕೊಡಬೇಕೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಬಂತು. ತಮಗೆ ಗೊತ್ತು, 'ಅನರ್ಹರಿಗೆಲ್ಲ ಶಾಸಕರ ಅಧ್ಯಕ್ಷತೆಯಲ್ಲಿ ಮನೆ ಕೊಟ್ಟರಿ' ಎಂದು ಇದೇ ಮನೆಯ ಸದಸ್ಯರಾಗಿರುವವರ ಮೇಲೆ ದೊಡ್ಡ ಆರೋಪ ಬಂತು. ನಾವೀಗ ಆ ಮನೆಯನ್ನು cancel ಮಾಡಿಬಿಟ್ಟರೆ, ಅಷ್ಟು ಮನೆ ಬರಲಿಲ್ಲವೆಂದರೆ, 'ಅವನು ಅನರ್ಹ' ಎಂದು ಒಬಬ್ ಅಧಿಕಾರಿ ಬರೆದಿಟ್ಟುತ್ತಾನೆ. ಆ ಮನೆಯನ್ನು ಕೊಡಿ ಎಂದು ಬರೆದರೆ ನಮ್ಮ ಸ್ಥಿತಿ ಏನು? ಶಾಸಕರು ಅಧ್ಯಕ್ಷರಾಗಿರುವ ಆ Vigilance Committee ಸ್ಥಿತಿ ಏನು ಎಂದು ನಮಗೆ ಜಿಜ್ಞಾಸೆ ಬಂತು. ನಿಲ್ಲಿಸಿದರೆ ನಮ್ಮ constituency ಗೆ ಬರುವ ಮನೆ ಹೋಗುತ್ತದೆ. ನಿಲ್ಲಿಸದೇ ಹೋದರೆ ನಾವೆಲ್ಲ ತಪ್ಪಿತಸ್ಥರಾಗುತ್ತೇವೆ. cognizance ನಲ್ಲಿ ಇದ್ದರೂ ಕೂಡ ನಾವು ಆ ಸಮಿತಿಯಲ್ಲಿ ಕುಳಿತುಕೊಂಡು ತಪ್ಪು ಮಾಡುತ್ತಿದ್ದೇವೆನ್ನುವ ಸ್ಥಿತಿ ನಿರ್ಮಾಣವಾಯಿತು. 100–150–200 ಮನೆಗಳು ನಮ್ಮ ನಮ್ಮ ಕ್ಷೇತ್ರಗಳಲ್ಲಿ lapse ಆಗುವ ಸ್ಥಿತಿ ನಿರ್ಮಾಣವಾಯಿತು. ಸಿದ್ಧಾಂತಗಳು, ಮೇಲ್ಮಟ್ಟದ ಭಾಷಗಳು ಬೇರೆ. ಒಂದೊಂದು ಕ್ಷೇತ್ರಕ್ಕೆ, ತಾಲ್ಲೂಕಿಗೆ ಇಷ್ಟು ಮನೆಗಳೆಂದು ಕೊಡಬೇಕಾದರೆ,

ನಾವು ಅಲ್ಲಿ ಕುಳಿತುಕೊಂಡು ಸ್ವಲ್ಪ ನಮ್ಮ ತಲೆಯನ್ನು ಉಪಯೋಗಿಸಿಕೊಂಡು ಹಂಚುತ್ತಿದ್ದೆವು. ಎಲ್ಲಿ ಎಸ್.ಸಿ / ಎಸ್.ಟಿ ಜಾಸ್ತಿಯಿದ್ದಾರೆ ಅಲ್ಲಿ ಎಸ್.ಸಿ / ಎಸ್.ಟಿ ಗೆ ಜಾಸ್ತಿ ಮಾಡುವುದು, ಎಲ್ಲಿ OBC ಜಾಸ್ತಿಯಿದ್ದಾರೆ ಅಲ್ಲಿ OBC ಗೆ ಜಾಸ್ತಿ ಮಾಡುವುದು. ಆದರೆ, ಈಗ ಹಾಗಾಗಲಿಲ್ಲ. Corporation ನ ಅಧಿಕಾರಿ ಇಲ್ಲಿ ಕುಳಿತುಕೊಂಡು '60–60 ಮನೆ ಇಂತಿಂಥ ಪಂಚಾಯಿತಿಗಳಿಗೆ ಇಂತಿಂಥ category ಗೆ ಇಂತಿಂಥ ಮನೆ' ಎಂದು ಬರೆದು ಬಿಡುತ್ತಾನೆ. ಅದರಂತೆ ಕೊಟ್ಟರೆ ಉಪಯೋಗವಾಯಿತು, ಕೊಡಲಿಲ್ಲವೆಂದರೆ lapse ಆಯಿತು. ಸರ್ಕಾರದಿಂದ ಬರುವ funds ಅನ್ನು ಕಳೆದುಕೊಳ್ಳಬಾರದೆಂದು 2 ನೇ ಮನೆ, 3 ನೇ ಮನೆ ಅನಿವಾರ್ಯವಾಗಿ ನಾವೇ ಕೊಡುತ್ತಿದ್ದೇವೆ. ಅದಕ್ಕಾಗಿ ಏನು ಮಾಡಿದ್ದೇವೆಂದರೆ, 'ಇಲ್ಲ, ಇಲ್ಲ, ಈ ಸಮಿತಿಗಳು ಆಗಲೇಬೇಕು, ತಾಲ್ಲೂಕು ಅನ್ನು ಒಂದು ಘಟಕ ಎಂದು ತೀರ್ಮಾನ ಮಾಡಬೇಕು, ಅಲ್ಲಿ ವಿವೇಚನೆಗೆ ತಲಾವಾರು ಅಥವಾ ಪಂಚಾಯತ್ ಸಂಖ್ಯಾವಾರು, ಅಥವಾ 2003ರ ಪಟ್ಟಿಯಲ್ಲಿರುವ ಫಲಾನುಭವಿಗಳವಾರೋ ಮನೆ ಹಂಚಿಕೆ ಸ್ಥಿತಿಯನ್ನು ನಿರ್ಮಾಣ ಮಾಡಬೇಕು, ಎಲ್ಲಿ ಫಲಾನುಭವಿಗಳು ಯಾವ್ಯಾವ category ಯಲ್ಲಿ ಜಾಸ್ತಿ ಸಿಗುತ್ತಾರೆ ಅಲ್ಲಿಗೆ ವರ್ಗಾವಣೆ ಮಾಡಲಿಕ್ಕೆ ನಮಗೇನಾದರೂ ಅಧಿಕಾರ ಬೇಕು, ಸುಮ್ಮನೆ ಮನೆ ಕೊಟ್ಟೆವು ಎಂದು ಅನರ್ಹ ಫಲಾನುಭವಿಗಳನ್ನು ಯಾರದೋ ತೀರ್ಮಾನಕ್ಕೆ ಯಾವುದೋ ಸಿದ್ಧಾಂತದ ತಳಹದಿಯಲ್ಲಿ ಮಾಡುವುದು ತರವಲ್ಲವೆಂದು, We requested our Hon'ble Chief Minister, ಸನ್ಮಾನ್ಯ ಧರ್ಮಸಿಂಗ್ ಸಾಹೇಬರ ಕಾಲದಲ್ಲಿ ಒತ್ತಡ ತರುವುದರ ಮೂಲಕ ಕೇಳಿದೆವು. ಸರ್ವಪಕ್ಷಗಳ ಸಭೆಯಲ್ಲಿ ಅವರು ಸಹ ಒಪ್ಪಿದರು. ಆದರೆ, ಆವತ್ತಿನ RDPR Commissioner ರವರು ಒಪ್ಪಲಿಲ್ಲ. 'ಒಂದು bill ತನ್ನಿ ಸರ್, ಶಾಸನ ತೆಗೆದುಕೊಂಡು ಬನ್ನಿ, ಈ ಸಭೆಯಲ್ಲಿ ನಿರ್ಧಾರವಾಗಲಿ ಎಂದು' ಆವತ್ತು ನಾವು ಹೇಳಿದೆವು. ಆಕಸ್ಮಿಕವಾಗಿ ಅದನ್ನು ತರಲಿಕ್ಕಾಗಲಿಲ್ಲ. 'ಇಲ್ಲ, ಇಲ್ಲ, ಇದೇನಾದರೂ ನಿಜವಾದ ಫಲಾನುಭವಿಗಳಿಗೆ ಹೋಗಬೇಕೆಂದರೆ ನೀವೇನಾದರೂ ಇವತ್ತು ಒಂದು ಅಧಿಕಾರವನ್ನು ಶಾಸಕರಿಗೆ ಕೊಡಬೇಕು, ಮನೆಯನ್ನು ರದ್ದು ಮಾಡಿದವರು ಬೇರೆ ಮನೆ ಕೊಡುವಷ್ಟಾದರೂ ಅಧಿಕಾರ ಕೊಡದಿದ್ದರೆ ನಾವ್ಯಾತಕ್ಕೆ ಅಲ್ಲಿ ಕುಳಿತುಕೊಳ್ಳಬೇಕೆಂದು' ಈ ಸರ್ಕಾರ ಬಂದ ಮೇಲೆ ಸಹ ನಾವು ಒತ್ತಡ ಹಾಕಿದೆವು. ಇದರಲ್ಲೇನು ಮಾನ್ಯ ಉದಾಸಿಯವರು bill ತಂದಿದ್ದಾರೆ, ಅವರೇ ನಮಗೆ ಅಧಿಕಾರ

ಕೊಡಲಿಲ್ಲ. ಈ bill ಅನ್ನು ನೀವು ಓದಿದರೆ ಗೊತ್ತಾಗುತ್ತದೆ. ನಮಗೆ ಅವರು ಅಧಿಕಾರ ಕೊಟ್ಟಿದ್ದಾರೆಂದು ನಾನು ಭಾವಿಸುವುದಕ್ಕಾಗುವುದಿಲ್ಲ. ಅವರು ಕನಿಷ್ಠ ಈ bill ಅನ್ನು ಮತ್ತೆ ಅಮೆಂಡ್ ಮಾಡಬೇಕು. ಆ ವಿಧಾನಸಭಾ ಕ್ಷೇತ್ರದ ಬಹುತೇಕ area ಬರುವವನು ಸಮಿತಿಯಲ್ಲಿ ಅಧ್ಯಕ್ಷ ಎಂದು ಏನು task force ಗೆ ಮಾಡಿದ್ದೀರಿ, ಅದು ಇಲ್ಲಿ incorporate ಆಗಬೇಕು. ಮತ್ತೆ ಇಲ್ಲಿ ರಾಜಕೀಯ ಆಗಬೇಕೆನ್ನುವುದನ್ನು ನಾವಿಲ್ಲಿ ಸಹಿಸುವುದಕ್ಕಾಗುವುದಿಲ್ಲ. ಎರಡನೆಯದು, ಗ್ರಾಮಸಭೆ ಮೀರಿ ನಮಗ್ಯಾರಿಗೂ ಅಧಿಕಾರ ಬೇಕಾಗಿಲ್ಲ. ಆದರೆ, ತಾಲ್ಲೂಕುಗಳಿಗೆ ಮನೆಗಳನ್ನು ತಾವು allot ಮಾಡಬೇಕು. ಎಲ್ಲೆಲ್ಲಿ ಯಾವ್ಯಾವ category ಜಾಸ್ತಿ ಇರುತ್ತಾರೆ, ವೈಜ್ಞಾನಿಕವಾಗಿ ನಿಮ್ಮ ಪಟ್ಟಿ ಪ್ರಕಾರವೇ ನಿಮ್ಮ census survey report ಪ್ರಕಾರವೇ allot ಮಾಡುವಷ್ಟಾದರೂ criteria ಅನ್ನು ನೀವು ನಮಗೆ ಕೊಡಬೇಕಾಗುತ್ತದೆ. ನನ್ನ ಗ್ರಾಮ ಪಂಚಾಯತ್‌ನಲ್ಲಿ Scheduled Caste beneficiary ಯೇ ಇಲ್ಲ, ಆದರೆ, ನಾವು ಕೊಡಲೇಬೇಕು. ಇನ್ನೊಂದು ಕಡೆ ಒದ್ದಾಡುತ್ತಿದ್ದಾರೆ, 20 ವರ್ಷ 30 ವರ್ಷದಿಂದ ಅವರು ಮನೆ ಕಟ್ಟಿಕೊಳ್ಳಲಿಕ್ಕಾಗಲಿಲ್ಲ, ಒಂದೇ ಕಡೆ concentrate ಆಗಿದ್ದಾರೆ. ಕೊಡುವುದಕ್ಕೆ ಶಕ್ತಿ ಇಲ್ಲ. ಈ ಸ್ಥಿತಿಯನ್ನು ನೀವು ಸ್ವಲ್ಪ ತಿಳಿ ಮಾಡಬೇಕಾಗಿದೆ. ಈ ಸ್ಥಿತಿಯನ್ನು ತಿಳಿ ಮಾಡಬೇಕೆಂದರೆ, ಮಾನ್ಯ ಉದಾಸಿಯವರೆ, ನೀವೇನು bill ತಂದಿದ್ದೀರಿ, ಇದಕ್ಕೆ ಇನ್ನೂ amendment ಮಾಡಬೇಕು ಮತ್ತು 'ಆ ಶಾಸನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಈ ಸಭೆ ಮಾಡಿದ್ದೇವೆಂದು' ತಾವು ಕಡ್ಡಾಯವಾಗಿ ಹೇಳಬೇಕು. ಇಷ್ಟು Vague ಆಗಿ ತಂದಿರುವ bill ಅನ್ನು ನಾನೂ ಕೂಡ ಒಪ್ಪುವುದಿಲ್ಲ. ಎರಡನೆಯದಾಗಿ, 'where gram panchayat fails to deliver the house' ಎಂದು ಈ bill ನಲ್ಲಿ ಹೇಳಿದ್ದಾರೆ. ಅವರು ನಮಗೆ direct ಅಧಿಕಾರ ಕೊಟ್ಟಿಲ್ಲ. ಗ್ರಾಮಪಂಚಾಯತ್‌ನಲ್ಲಿ ಅಧಿಕಾರ ಮೊದಲೂ ನಮಗೆ ಇದೆ. ಆದರೆ, ಅದೂ ಕೂಡ ದುರಂತವಾಗುತ್ತದೆ. ನಾನು ಹೇಳುತ್ತಿದ್ದೇನೆ, ಅದರಿಂದ ನಮಗೆ ಯಾವ ಅಧಿಕಾರವನ್ನೂ ಕೊಡುವುದಿಲ್ಲ. ನೀವು ಅದು ಇಡಲೇಬೇಕೆಂದರೆ, ದಯಮಾಡಿ bill ಅನ್ನು ಹಿಂದಕ್ಕೆ ತೆಗೆದುಕೊಳ್ಳಿ. ಅದು ನಮಗೆ ಬೇಕಿಲ್ಲ. ನಮ್ಮನ್ನು ಕೆನ್ನೆ ಮೇಲೆ ಹೊಡೆಸಿಕೊಳ್ಳುವುದಕ್ಕೆ ಇಟ್ಟು ಅಧಿಕಾರವನ್ನು ಇನ್ನೊಬ್ಬರು ಯಾರಿಗೋ ಕೊಡುತ್ತೇವೆಂದು ಹೇಳಿದರೆ, ಸುಮ್ಮಸುಮ್ಮನೆ ಹೋಗಿ ಕೆನ್ನೆ ಮೇಲೆ ಹೊಡಿಸಿಕೊಳ್ಳುವಂಥ ಮೂರ್ಖರಾಗಿ ವಿಧಾನಸಭೆಗೆ ನಾವೇನು ಬಂದಿಲ್ಲ. ಕೊಡಬೇಕೆಂದರೆ ಗ್ರಾಮಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳನ್ನು ಅರ್ಹತೆ

ಮೇಲೆ ಆಯ್ಕೆ ಮಾಡುವ ಅಧಿಕಾರವನ್ನು ಆ ಸಮಿತಿಗೆ ನೀವು ಕೊಡಬೇಕು. ಇಲ್ಲವೆಂದರೆ, ದಯಮಾಡಿ withdraw ಮಾಡಿಕೊಳ್ಳಬೇಕು. ನಮಗೂ ಅವರಿಗೂ ವ್ಯಾಜ್ಯವನ್ನು ತರಕೂಡದು. ಅವರು ನೋಡಲಿಲ್ಲ, ನಾನು ಕೊಡುತ್ತೇನೆಂದು ನಾನು ರಾಜಕೀಯ ಮಾಡುವುದು, ಆ ಪಂಚಾಯತ್ ಮೇಲೆ ಎತ್ತಿಕಟ್ಟುವುದು, ಆ ಪಂಚಾಯತ್‌ನಲ್ಲಿ ತೀರ್ಮಾನ ಮಾಡಿದ ಹಾಗೆ ಮಾಡಿ ನನಗೆ ಅಧಿಕಾರ ತರಿಸಿಕೊಳ್ಳಬೇಕೆಂದು ನಿರ್ಣಯ ಮಾಡುವುದು, ಈ ಜಿಜ್ಞಾಸೆಗಳಿರುವಂಥ ಶಾಸನವನ್ನು ಕರ್ನಾಟಕದಲ್ಲಿ ತಾವು ತರಕೂಡದು. ತರುವುದೇ ಆದರೆ, ಹಿಂದೇನಿತ್ತು, ಗ್ರಾಮಸಭಾ ತೀರ್ಮಾನದ ಪಟ್ಟಿ ಮೇಲೆ ಶಾಸಕರು ಕುಳಿತುಕೊಂಡು ಪರಿಶೀಲನೆ ಮಾಡಿ ಅರ್ಹತೆ ಮೇಲೆ ಮನೆಗಳ ಫಲಾನುಭವಿಗಳ ಆಯ್ಕೆ ಮಾಡುವಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ನಾನು ಪ್ರಮುಖವಾಗಿ ತಮ್ಮಲ್ಲಿ ಒತ್ತಡ ಮಾಡುವುದೇನೆಂದರೆ, ತಾಲ್ಲೂಕು ಅನ್ನು ಒಂದು ಘಟಕ ಎಂದು ತೀರ್ಮಾನ ಮಾಡಿ ರಾಜ್ಯ ಸರ್ಕಾರ......

ಶ್ರೀ ಕೆ.ಎನ್. ರಾಜಣ್ಣ :– ಒಂದು ಕ್ಷೇತ್ರವನ್ನು ಘಟಕ ಎಂದು ಮಾಡಬೇಕು.

ಶ್ರೀ ಜಿ.ಸಿ. ಮಾಧುಸ್ವಾಮಿ :– I am agreeable Rajanna. ಮಾಡಬಹುದು. ಕ್ಷೇತ್ರ ಎಂದೇ ಮಾಡಿ. ಅದರಲ್ಲೇನೂ ತಕರಾರಿಲ್ಲ. ಕ್ಷೇತ್ರವನ್ನೇ ಒಂದು ಘಟಕ ಎಂದು ಮಾಡಿ ಅಲ್ಲಿರುವ ಪಂಚಾಯಿತಿಗೆ ಅಲ್ಲಿರುವ ಜನಸಂಖ್ಯೆಯ ಮೇಲೆ ನೀವೇನು ನಮಗೆ ಮನೆಗಳನ್ನು ಕೊಡುವ ಸ್ಥಿತಿ ಇದೆ, ನಮಗೇ ಕೊಟ್ಟರೆ ನಾವು ಮಾಡಬಹುದು. ಇವಾಗ ಏನಾಗುತ್ತದೆಂದರೆ, 2 ದಿವಸ 3 ದಿವಸ ಇರುವಾಗ ನೀವು ಮನೆಗಳ allotment ತೋರಿಸುತ್ತಿದ್ದೀರಿ. ಗ್ರಾಮಸಭೆಗಳನ್ನು ಮಾಡು ಎಂದು ಹೇಳುತ್ತಿದ್ದೀರಿ. ಗ್ರಾಮಸಭೆಗಳನ್ನು ಮಾಡುವುದಕ್ಕೆ ಆಗುತ್ತಿಲ್ಲ. Nodal Officers ಸಿಗುತ್ತಿಲ್ಲ. 'Taluk level officers ಎಲ್ಲ ಅಲ್ಲಿ ಬಂದು ಕುಳಿತುಕೊಳ್ಳುತ್ತಿಲ್ಲವೆಂದು' ಎಲ್ಲಾ ಗ್ರಾಮಸಭೆಗಳಲ್ಲಿ ಗಲಾಟೆಯಾಗುತ್ತಿದೆ. ಎಲ್ಲರೂ ಕುಳಿತುಕೊಳ್ಳಬೇಕೆಂದು ಆದೇಶ ಮಾಡಿದ್ದೀರಿ. ಗ್ರಾಮಸಭೆ ಮಾಡಲಿಕ್ಕೆ ಒಂದು ತಿಂಗಳಾದರೂ ನಮಗೆ ಅವಕಾಶ ಬೇಕಾಗುತ್ತದೆ. ಆದರೆ, ನೀವು ಅಷ್ಟು ಅವಕಾಶ ಕೊಟ್ಟಿರುವುದಿಲ್ಲ. ಈ ಮಧ್ಯೆ ನೀವೇನು ಮನೆ ಆಯ್ಕೆ ಪ್ರಕ್ರಿಯೆ ಇಟ್ಟಿದ್ದೀರಿ, ಯಾವುದೂ ಸಹ ಕಾನೂನು ಬದ್ಧವಾಗಿ ಆಯ್ಕೆಯಾಗುವುದಕ್ಕೆ ಆಗುತ್ತಿಲ್ಲ. ಯಾವುದೇ ಸಮಿತಿ ಮುಂದೆ check list ಬರುತ್ತಿಲ್ಲ. ಅವನಿಗೆ ಅರ್ಹತೆ ಇದೆಯೋ ಅಥವಾ ಇಲ್ಲವೋ ಎಂದು ನಿಮ್ಮ ಪಂಚಾಯಿತಿ Secretary ಯಿಂದ ನಮ್ಮ ಮುಂದೆ ದೃಢೀಕರಣವಾಗುತ್ತಿಲ್ಲ. ನಿಮ್ಮ E.O. certify ಮಾಡುತ್ತಿಲ್ಲ. ನಾಳೆ ಯಾರಾದರೂ

Court ಗೆ ಹೋದರೆ ತಾವು Vigilance Committee ಎಂದು ನಿರ್ಮಾಣ ಮಾಡಿ ನಾವೆಲ್ಲ ಕಂಬಿ ಎಣಿಸುವ ಸ್ಥಿತಿಯನ್ನು ನಿರ್ಮಾಣ ಮಡಿದ್ದೀರಿ. ನೀವು ಪಂಚಾಯತ್‌ಗೆಂದು Final ಮಾಡಲಿಲ್ಲ. Vigilance Committee ಮುಂದೆ ಹೋಗಿ ಅವರು sign ಹಾಕಿದ ಮೇಲೆ ಮನೆ ಕೊಡುತ್ತೇವೆಂದರೆ, as it is we are empowered, as it is we are there as Chairmen, ಇದನ್ನು ನಮಗೆ ನೀವು ಹೊಸದಾಗೇನೂ ಕೊಡುತ್ತಿಲ್ಲ. ನಾವು approve ಮಾಡಿದ ಮೇಲೆಯೇ ನೀವು ಮನೆ ಕೊಡುವುದಕ್ಕೆ ಆಗುತ್ತಿರುವುದು. ನಾವ್ಯಾವುದೂ ಅಧಿಕಾರ ಕಿತ್ತುಕೊಂಡು ಹೋಗಿಲ್ಲ. ಕೊಡುತ್ತಿರುವ ಅಧಿಕಾರವನ್ನು ಶಾಸನಬದ್ಧವಾಗಿಯಾದರೂ ಕೊಡಿ. ಇಲ್ಲವೆಂದರೆ ದಯಮಾಡಿ ತೆಗೆದುಬಿಡಿ. ನಮಗೇನೂ ಮನೆ ಮಾಡಿಕೊಂಡು ಜೀವನ ಮಾಡುವ stage ಏನೂ ಯಾರಿಗೂ ಬಂದಿಲ್ಲ. ನಾವು ಸಹ ಮೂರು ನಾಲ್ಕು ಅವಧಿಗೆ election ನಲ್ಲಿ ಆರಿಸಿ ಬಂದಿರುವವರು. ಅಧಿಕಾರವನ್ನು ಕೊಡುವುದಾದರೆ ನಮಗೇ ಜವಾಬ್ದಾರಿ, ನಮ್ಮ ವಿವೇಚನೆ ಉಪಯೋಗಿಸುವುದಕ್ಕೆ ಕೊಡಿ. We will not come in the way. Central Act ಮಣಿಶಂಕರ್ ಅಯ್ಯರ್‌ರವರು ಬೇಲೂರು declaration ಏನು ಗ್ರಾಮಸಭಾ is the first unit of plan ಎಂದು ಹೇಳಿದ್ದೀರಿ, we will never come in its way. As it is ಗ್ರಾಮಪಂಚಾಯಿತಿಗೆ ಅಧಿಕಾರವಿಲ್ಲ, ಆ wrong signal ಅನ್ನು ಈ ಸಭೆಯಿಂದ ಕೊಡಬಹುದು, ಅಧ್ಯಕ್ಷರಿಗೆ ನೀವು ಯಾರೂ ಅಧಿಕಾರ ಕೊಟ್ಟಿಲ್ಲ. ಯಾರಿಗೂ ಅಧಿಕಾರ ಕೊಡದೆಯೇ ಇಡೀ ವ್ಯವಸ್ಥೆ ಕಲುಷಿತಗೊಂಡಿರುವುದನ್ನು ಸರಿಪಡಿಸುವುದಕ್ಕೆ ನೀವು ಇವತ್ತು ಒಂದು ವ್ಯವಸ್ಥೆ ಮಾಡಬೇಕು. ಈ ಸಮಿತಿ ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿಯೇ ಆಗಬೇಕು. ಮತ್ತೆ ಗ್ರಾಮಸಭಾ ಪಟ್ಟಿ ಆದಮೇಲೆ ಅನರ್ಹತೆ ಆಧಾರದ ಮೇಲೆ ಅಕಸ್ಮಾತ್ ಯಾರನ್ನಾದರೂ ನಾವು ಕೈಬಿಟ್ಟರೆ ಇನ್ನೊಬ್ಬರನ್ನು ಸೇರಿಸುವ ಅಧಿಕಾರ ಕೊಟ್ಟರೆ ಮಾತ್ರ ಈ ಅಧಿಕಾರ ಕೊಡಿ. ಮತ್ತೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಪಂಚಾಯತ್‌ಗೆ ಯಾವುದಾದರೂ ಮನೆ ಕೊಡುವುದಾದರೂ ಕೂಡ ನಮಗೆ ಈ ಅಧಿಕಾರ ಬೇಕಿಲ್ಲ. ಕ್ಷೇತ್ರಕ್ಕೆ ಇಷ್ಟು ಮನೆ ಎಂದು ಕೊಟ್ಟು ಅದನ್ನು ಹೇಗೆ ಹಂಚಬೇಕೆಂದು formula ಕೊಡಲಿ, we will accept. ಇಲ್ಲಿಯೇ ಕುಳಿತುಕೊಂಡು ನಿಮಗೆ 20 ಮನೆ 30 ಮನೆ 40 ಮನೆ ಎಂದು ಕೊಟ್ಟು ಹಂಚಿ ಎಂದರೆ ನಾವೇನು ತಿಪ್ಪೆಯಲ್ಲಿ ಬಿದ್ದಿರುವ ಆಳುಗಳಲ್ಲ, ಕೂಲಿ ಮಾಡುವವರಲ್ಲವೆಂದು ನಿಮಗೆ ಹೇಳಿ, ಈ bill ಅನ್ನು amend

ಮಾಡಬೇಕು. ಮಾನ್ಯ ಉದಾಸಿಯವರೆ, ಈ bill ಕಡ್ಡಾಯವಾಗಿ amend ಆಗಬೇಕು. ಆ ಸಮಿತಿಯ ಅಧ್ಯಕ್ಷತೆ ಯಾರಿಗಿರಬೇಕೆನ್ನುವುದನ್ನು ತಾವು ಹೇಳಬೇಕು. ಮತ್ತೆ ಗ್ರಾಮಸಭೆಯಲ್ಲಾಗಿರುವುದರ ಮೇಲೆ ನಾವು ಪರಿಶೀಲನೆ ಮಾಡುವ ಅಧಿಕಾರ ಕೊಡಬೇಕು. ಎಲ್ಲಿ reject ಮಾಡುತ್ತೇವೆ ಅಲ್ಲಿ ಹೊಸಬರಿಗೆ ಕೊಡುವ ಅಧಿಕಾರ ಕೊಟ್ಟರೆ ಮಾತ್ರ ಈ bill pass ಮಾಡಬೇಕೆಂದು ಕೇಳಿಕೊಂಡು, bill ತಂದಿರುವುದಕ್ಕೆ ಇಲ್ಲಿ ಯಾವುದೇ ಸಿದ್ಧಾಂತಕ್ಕೆ ಅಡ್ಡಿಯಿಲ್ಲ. ನಾವೆಲ್ಲ ಈ ಸಿದ್ಧಾಂತ ಒಪ್ಪಿಕೊಂಡಿರುವವರೇ, ನಾವೂ ಸಹ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಗರಡಿಯಲ್ಲಿ ಬೆಳೆದವರೇ, ಜನರಿಗೆ ಒಳ್ಳೆಯದಾಗಲೆಂದು ಗ್ರಾಮೀಣ ಪ್ರದೇಶದಲ್ಲಿ ರಾಜಕೀಯ ಮಾಡುತ್ತಿರುವವರು, ದಯಮಾಡಿ MLA ಗಳನ್ನು empower ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :– ಈಗ ರೇಣುಕಾಚಾರ್ಯರವರು ಮಾತನಾಡಿ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೇ, ಕಬ್ಬು ಬೆಳೆಗಾರರ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳು ಸಾಯಂಕಾಲ 5 ಗಂಟೆಗೆ ಕರೆದಿದ್ದು ಅಲ್ಲಿಗೆ ನಾನು ಹೋಗಬೇಕಾಗಿರುವುದರಿಂದ ನನಗೆ ಮಾತನಾಡಲು ಮೊದಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :– ರೇಣುಕಾಚಾರ್ಯರವರೆ, ಒಂದ್ನಿಮಿಷ ತಾಳಿ. 5 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಮೀಟಿಂಗ್ ಕರೆದಿದ್ದು ಅಲ್ಲಿಗೆ ಅವರು ಹೋಗುತ್ತಿದ್ದಾರೆ. ಅದಕ್ಕೆ ಅವರು ಮಾತನಾಡಲಿ. ನಂತರ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ) :– ಮಾನ್ಯ ಉಪಾಧ್ಯಕ್ಷರೆ, ಇವತ್ತೇನು ಮಾನ್ಯ ಪಂಚಾಯತ್ ರಾಜ್ ಸಚಿವರು ಒಂದು ತಿದ್ದುಪಡಿ ತಂದಿದ್ದಾರೆ, ಇದು ಬಹಳ ಸಂತೋಷದಿಂದ ಮತ್ತು ಮನಃಪೂರ್ವಕವಾಗಿ ಮೆಚ್ಚಿ ಈ bill ಅನ್ನು ತಂದಿದ್ದಾರೆಂದು ನನಗನ್ನಿಸುವುದಿಲ್ಲ. ಒಂದು ಕಡೆ ಕಾನೂನಿನ ಇಕ್ಕಟ್ಟು, ಇನ್ನೊಂದು ಕಡೆ ವಾಸ್ತವಿಕ ಪರಿಸ್ಥಿತಿ. ಈ ಎರಡನ್ನೂ ನೋಡಿ ಮಧ್ಯಮ ಮಾರ್ಗವನ್ನು ಹಿಡಿದು ಏನಾದರೂ ಮಾಡಿ ಮನೆಗಳನ್ನು ಫಲಾನುಭವಿಗಳಿಗೆ ಹಂಚಬೇಕೆನ್ನುವ ಉದ್ದೇಶದಿಂದ ಈ bill ಅನ್ನು ತಂದಿದ್ದಾರೆಂದು ನಾನು ಪ್ರಾಮಾಣಿಕವಾಗಿ ಭಾವಿಸುತ್ತೇನೆ. ಈಗ ಎರಡು ವಾದಗಳಿವೆ. ಅದೇನೆಂದರೆ, ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಗಳಾಗಬೇಕು, ತನ್ಮೂಲಕ ಮನೆಗಳನ್ನು ಹಂಚಬೇಕೆಂದು ಒಂದು ವಾದ

ಇದ್ದರೆ, ಡಾ॥ ಶರಣ ಪ್ರಕಾಶ್ ರುದ್ರಪ್ಪನವರಂಥವರದು -- ಇದಕ್ಕೆ ಕಾನೂನಿನ ತದ್ವಿರುದ್ಧವಾಗಿ ನಿಲುವು ಆಗಬಾರದು ಎನ್ನುವಂಥಾದ್ದು ಅವರದು ಕೂಡ ಒಂದು ಅಭಿಪ್ರಾಯವಿದೆ. ಈ ಬಗ್ಗೆ ಪಿ.ಜಿ.ಆರ್ ಸಿಂಧ್ಯಾರವರು ಮಾತನಾಡಿದ್ದಾರೆ. ಹಳ್ಳಿಗಾಡಿನಲ್ಲಿ ನಮ್ಮ ಸಮಾಜದ ಸ್ಥಿತಿಗತಿ ಹೇಗಿದೆ ಎಂದರೆ, ಸಮಾಜ, ಜಾತಿ ಗುಂಪುಗಳ ಆಧಾರದ ಮೇಲೆ ಮತ್ತು ದುಡ್ಡಿನ ಆಧಾರದ ಮೇಲೆ ರಾಜಕೀಯದ ಆಧಾರದ ಮೇಲೆ ಈ ರಾಜಕಾರಣ ಇರುತ್ತದೆ. ಒಂದನ್ನು ನಾವು ಕಲ್ಪನೆ ಮಾಡಿಕೊಳ್ಳಬೇಕು. ಏನೆಂದರೆ, ನಾವು ಗ್ರಾಮಸಭೆ ಮಾಡಿ ಪ್ರಾಮಾಣಿಕವಾಗಿ ಅರ್ಹರಿರುತ್ತಾರೆ ಅಂಥ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಇವತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಿದೆಯೇ? ಒಂದೇ ದಿವಸ nodal officers ಅನ್ನು Secretary ಹತ್ತಿರ ಕಳುಹಿಸಿ ಬೆಳಿಗ್ಗೆಯಿಂದ 6 ಗ್ರಾಮಸಭೆಗಳನ್ನು ಮಾಡಿಕೊಂಡು ಬರುತ್ತಾರೆ. ಹಳ್ಳಿಯಲ್ಲಿ ಬೆಳಿಗ್ಗೆ ಕೂಲಿ ಮಾಡುವ ಜನರು, ಬಡವರು, ರೈತರು ತಮ್ಮ ತಮ್ಮ ಕೆಲಸಗಳಿಗೆ ಹೊರಟಿರುತ್ತಾರೆ. ಯಾರೋ ನಮ್ಮಂಥ ಪುಢಾರಿಗಳು, ಹೋಟೆಲ್‌ನಲ್ಲಿ ಕುಳಿತಂಥವರು, ಪಂಚಾಯಿತಿ ಕಛೇರಿಯಲ್ಲಿ ಕುಳಿತಂಥವರು ಸಭೆ ಸೇರಿ ಅವರಿಗೆ ಬೇಕು ಬೇಕಾದವರ ಫಲಾನುಭವಿಗಳ ಹೆಸರನ್ನು ಬರೆಸುತ್ತಾರೆ. ಆ ಪಟ್ಟಿ ತಂದು ಇಂತಿಂಥವರಿಗೆ ಮನೆ ಹಂಚಿದ್ದೇವೆಂದು ಇಲ್ಲಿ ಬಂದು ನಾವು ಭಾಷಣ ಮಾಡುತ್ತೇವೆ. ವಾಸ್ತವಿಕವಾಗಿ ಯಾವ ಫಲಾನುಭವಿಗಳಿಗೆ ಮನೆಗಳು ಸಿಗಬೇಕೋ ಆ ಫಲಾನುಭವಿಗಳು ಆ ಗ್ರಾಮಸಭೆಯಲ್ಲಿ ಬಂದು ಭಾಗವಹಿಸಲಿಕ್ಕೆ ಇವತ್ತಿನವರೆಗೂ ಸಾಧ್ಯವಾಗಲಿಲ್ಲ. ಇದು ವಸ್ತುಸ್ಥಿತಿಯಾಗಿದೆ. ಎರಡನೆಯದಾಗಿ, ನಮ್ಮ ಸಾಮಾಜಿಕ ಪರಿಸ್ಥಿತಿ ಎಷ್ಟು ಕಲುಷಿತವಾಗಿದೆಯೆಂದರೆ ಮರ್ಯಾದಸ್ಥರು, ಬಡವರು, ನಿಷ್ಠಾವಂತರು ಗ್ರಾಮಸಭೆಗಳಲ್ಲಿ ಕುಳಿತು ಮುಕ್ತವಾಗಿ ಮಾತನಾಡುವಂಥ ಧ್ವನಿ ಇವತ್ತು ಕೂಡ ದಲಿತರಿಗೆ, ಹೆಣ್ಣು ಮಕ್ಕಳಿಗೆ, ಬಡವರಿಗೆ, ಕೂಲಿ ಮಾಡುವವರಿಗೆ ಇಲ್ಲವೇ ಇಲ್ಲ. ಇದು ನಮಗೂ ನಿಮಗೂ ಗೊತ್ತಿದೆ. ಒಂದು ಪಾರ್ಟಿಯವರು ಒಂದು ಕಡೆ ನಿಂತರೆ, ಇನ್ನೊಂದು ಜಾತಿಯ ಗುಂಪು ಇನ್ನೊಂದು ಕಡೆ ನಿಲ್ಲುತ್ತಾರೆ. ಯಾವ ಮಹಿಳೆಯೂ ಕೂಡ ಇವತ್ತು ಗ್ರಾಮಸಭೆಗೆ ಬರುವಂಥ ಪರಿಸ್ಥಿತಿ ಹಳ್ಳಿಗಾಡಿನಲ್ಲಿ ಇಲ್ಲ. ಮಾನ್ಯ ಉಪಾಧ್ಯಕ್ಷರೇ, ನೀವು ಆ ಸ್ಥಾನದಲ್ಲಿ ಕುಳಿತು ಈ ಸಭೆಯನ್ನು ನಿಯಂತ್ರಣ ಮಾಡುವುದೇ ನಿಮಗೆ ಕಷ್ಟವಾಗಿರಬೇಕಾದರೆ, ಇನ್ನು Parliament ನಲ್ಲಿ ನಿಯಂತ್ರಣ ಮಾಡುವುದು ಅಲ್ಲಿನ ಸಭಾಧ್ಯಕ್ಷರಿಗೆ ಕಷ್ಟವಿರುವಾಗ ಗ್ರಾಮಸಭೆ ಎಂಬುದು ಒಂದು ಉಚ್ಚವಾದ ಕಲ್ಪನೆ. ಅದರಲ್ಲೇನೂ ಅನುಮಾನವೇ ಇಲ್ಲ.

ಒಂದು ಪ್ರಭುತ್ವವಾದ ಸಮಾಜದಲ್ಲಿ ಅಲ್ಲಿ ಎಲ್ಲರೂ ಕೂಡ ಸಾಮರಸ್ಯದಿಂದ, ಒಪ್ಪಂದದಿಂದ, ತಿಳುವಳಿಕೆಯಿಂದ, ಬದ್ಧತೆಯಿಂದ, ಗ್ರಾಮಸಭೆಗಳಲ್ಲಿ ಕುಳಿತು ಚರ್ಚೆ ಮಾಡಿದರೆ ಖಂಡಿತವಾಗಿಯೂ ಕೂಡ ಅರ್ಹರಿಗೆ ನ್ಯಾಯ ಸಿಗುತ್ತದೆ. ಆದರೆ, ಪರಿಸ್ಥಿತಿ ಹಾಗಿಲ್ಲ. ಲೋಕಸಭೆ ಮತ್ತು ವಿಧಾನಸಭೆಗಳನ್ನು ನಿಯಂತ್ರಿತವಾಗಿ ನಡೆಸಲಿಕ್ಕೆ ಇರಲಾರದ ಪರಿಸ್ಥಿತಿಯಲ್ಲಿ ನಾವು ಗ್ರಾಮಸಭೆಯಲ್ಲಿ ನಿರ್ಣಯಗಳಾಗಬೇಕೆಂದು ಏನೋ ಒಂದು Ethiopian theory ತಂದು ಇಲ್ಲಿ ಚಿಂತನೆ ಮಾಡುವುದು ಅಷ್ಟೊಂದು ವಾಸ್ತವಿಕವಾಗುವುದಿಲ್ಲ. ಇದೊಂದು ವಾಸ್ತವಿಕವಾದ ಪರಿಸ್ಥಿತಿ. ಆದರೆ, ನಾವು 73 ನೇ ತಿದ್ದುಪಡಿಗೆ ಕಾನೂನು ಮಾಡಿದ್ದೇವೆ. ಆ ಕಾನೂನಿಗೆ ವಿರುದ್ಧವಾಗಿ ಕೂಡ ನಾವು ಹೋಗುವ ಹಾಗಿಲ್ಲ. ಮಾನ್ಯ ಮಂತ್ರಿಗಳಿಗೆ ನಾನೊಂದು ಸಲಹೆ ಕೊಡುತ್ತೇನೆ. ಮಾನ್ಯ ಡಿ.ಟಿ. ಜಯಕುಮಾರ್‌ರವರು ಸದನದಲ್ಲಿದ್ದಾರೆ. ನೀವೂ ಕೂಡ ಹಿಂದೆ ಅರ್ಹ ಫಲಾನುಭವಿಗಳಿಗೆ ಲಾಟರಿ ಮುಖಾಂತರ ಮನೆಗಳನ್ನು ಹಂಚುವ ಕೆಲಸ ಮಾಡಿದ್ದಿರಿ. ಅದಕ್ಕಿಂತ ಮುಂಚೆ ಪಕ್ಷಪಾತವಿತ್ತು. ನನ್ನ ಪಾರ್ಟಿಯಲ್ಲಿ ಯಾರಿದ್ದಾರೆ, ನನ್ನ ಸಂಬಂಧಿಕರು ಯಾರಿದ್ದಾರೆಂದು ನೋಡಿ ಮನೆಗಳನ್ನು ಹಂಚುತ್ತಿದ್ದರು. ನಮ್ಮಲ್ಲಿ BPL card ಇದೆ. ನಮ್ಮಲ್ಲಿ ಎಲ್ಲಾ ಕೂಡ ಅಂಕಿ ಸಂಖ್ಯೆಗಳ ಆಧಾರದ ಮೇಲೆ, ಜಾತಿವಾರು ಪಟ್ಟಿಗಳು ಕೂಡ ಲಭ್ಯವಾಗಲಿಕ್ಕೆ ಸಾಧ್ಯವಿದೆ. ಪರಿಶಿಷ್ಟ ಜಾತಿ, ಹಿಂದುಳಿದ ವರ್ಗ ಎಷ್ಟು? ಮತ್ತು ಮೇಲ್ಜಾತಿಗಳಲ್ಲಿ ಬಡವರೆಷ್ಟು? ವಿಧವೆಯರೆಷ್ಟು? ಆ ಎಲ್ಲಾ ಪಟ್ಟಿಯನ್ನು ನಾವು ವೈಜ್ಞಾನಿಕವಾಗಿ ಪಡೆದುಕೊಳ್ಳಲಿಕ್ಕೆ ಸಾಧ್ಯವಿದೆ. Computerized ಯುಗದಲ್ಲಿ ಹೇಗೆ ನಾವು ಶಿಕ್ಷಕರನ್ನು ಯಾವ ಶಿಫಾರಸ್ಸು ಇಲ್ಲದೇ ಹಣದ ವ್ಯವಹಾರವಿಲ್ಲದೆಯೇ ಯಾವ ರೀತಿ ನೇಮಕಾತಿ ಮಾಡುತ್ತೇವೋ ಅಂಥದೊಂದು ವೈಜ್ಞಾನಿಕವಾದ ಪಟ್ಟಿ ತಯಾರಿಸಿ ಅದನ್ನು Computer ನಲ್ಲಿ feed ಮಾಡಬೇಕು.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ :– ತಾವು BPL ಪಟ್ಟಿ ಬಗ್ಗೆ ಮಾತನಾಡಿದಿರಿ. ನನ್ನ constituency ನಲ್ಲಿ 350 ಎಕರೆ ಇರುವಂಥವರು, 10–15 ಎಕರೆ ನೀರಾವರಿ ಜಮೀನು ಇರುವಂಥವರು BPL ಪಟ್ಟಿಯಲ್ಲಿದ್ದಾರೆ. ಅದು ಭಾರಿ ಸರಿ ಇದೆಯೆಂದು ಹೇಳುತ್ತಿದ್ದೀರಿ. ಅದು ಎಷ್ಟರ ಮಟ್ಟಿಗೆ ಸರಿ ಇದೆಯೆಂದು ಹೇಳಬೇಕು. ಅಲ್ಲಿಯೂ ಕೂಡ ಲೋಪವಿದೆ.

ಶ್ರೀ ಬಿ.ಆರ್. ಪಾಟೀಲ್ :-- ಇಡೀ ವ್ಯವಸ್ಥೆ ಗೊಂದಲದ ಗೂಡು ಆಗಿರುವುದರಿಂದ ನಾವು ಎಲ್ಲಿಯಾದರೂ ಒಂದು ಕಡೆ ನಿಲ್ಲಬೇಕಾಗುತ್ತದೆ. BPL ಪಟ್ಟಿ ಕೂಡ ವೈಜ್ಞಾನಿಕವಗಿಲ್ಲವೆಂಬುದು ನಮ್ಮ ನಿಮ್ಮೆಲ್ಲರ ಅನುಭವಕ್ಕೆ ಬಂದಿದೆ. ಒಂದು ವೇಳೆ ಈ BPL ಪಟ್ಟಿಯನ್ನೇ base ಆಗಿ ಇಟ್ಟುಕೊಂಡು ಇದಕ್ಕೊಂದು ವೈಜ್ಞಾನಿಕವಾದ ಪಟ್ಟಿಯನ್ನು ಖಾಯಂ ಆಗಿ ತಯಾರಿಸಿ ಎಲಾ ಫಲಾನುಭವಿಗಳಿಗೂ ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕು. ಅದು ಕೃಷಿ ಇಲಖೆಯಿಂದ ಬಂದಂಥ ಲಾಭ ಇರಬಹುದು, ಮತ್ತೊಂದರಿಂದ ಬಂದ ಲಾಭ ಇರಬಹುದು, ಎಲ್ಲಾ ಇಲಾಖೆಯಿಂದ ಬಂದ ಲಾಭವನ್ನು ಹಂಚುವುದಕ್ಕೆ, BPL ಪಟ್ಟಿಯನ್ನು base ಆಗಿ ಇಟ್ಟುಕೊಂಡು ಅದನ್ನು ಹಂಚುವುದಕ್ಕೆ ಹೊರಟರೆ ಒಂದು ದಾರಿ ಕಂಡುಹಿಡಿಯಲಿಕ್ಕೆ ಸಾಧ್ಯತೆ ಇದೆ. ಮಾನ್ಯ ಮಾಧುಸ್ವಾಮಿಯವರು ಕಳೆದ ಸಲ ಪಂಚಾಯತ್‌ರಾಜ್ ಇಲಾಖಾ ಬೇಡಿಕೆ ಮೇಲೆ ಮಾತನಾಡುವಾಗ ಬಹಳ ಮಹತ್ವವಾದ ಮಾತನ್ನು ಹೇಳಿದರು. ಪಂಚಾಯತ್‌ಗಳು ಜನರಿಂದ ಆರಿಸಲ್ಪಟ್ಟ ಸಮಿತಿಗಳು. ಆ ಪಂಚಾಯಿತಿಗಳಿಗೆ ಏನೇನೂ ಅಧಿಕಾರವಿಲ್ಲದೇ ಎಲ್ಲವೂ ಕೂಡ ಗ್ರಾಮಸಭೆಯಲ್ಲಿಯೇ ನಿರ್ಣಯವಾಗಬೇಕೆಂದರೆ ಪಂಚಾಯತ್ ಏಕೆ ಇರಬೇಕು ಎನ್ನುವ ಮೂಲಭೂತ ಪ್ರಶ್ನೆಯನ್ನು ಅವರು ಕೇಳಿದರು. ಈ ತರಹ ಮಾಡುವುದರಿಂದ ನಾವು ಪಂಚಾಯಿತಿಯನ್ನು ಸಹ ನಿಶ್ಯಕ್ತ ಮಾಡುತ್ತಿದ್ದೇವೆ. ಅವರೂ ಕೂಡ ಜನರಿಂದ ಆರಿಸಿ ಬಂದಿದ್ದಾರೆ. ನನ್ನ ಸೂಚನೆ ಏನೆಂದರೆ, ನೀವು ಪಂಚಾಯಿತಿಗಳಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ಯಾರ್ಯಾರಿಗೆ ಕೊಟ್ಟಿರಿ? ಎಲ್ಲೆಲ್ಲಿ ಕೆಲಸ ಮಾಡಿದ್ದೀರಿ, ಆ ಬಗ್ಗೆ ನೀವು ಬೇಕಾದರೆ ಗ್ರಾಮಸಭೆಗಳಲ್ಲಿ ಲೆಕ್ಕಪತ್ರ ಕೊಡಿ. Accountability ಇರುತ್ತದೆ. ಹಾಗಾಗಿ ಮನೆಗಳನ್ನು ಹಂಚುವುದಕ್ಕೆ ಒಂದು ಗ್ರಾಮ ಪಂಚಾಯಿತಿ ಸದಸ್ಯರಿಗೆ ಕೊಡಿ. ಏಕೆಂದರೆ, ಅವರು ಗೆದ್ದು ಬಂದಿದ್ದಾರೆ. ಇದು ನನ್ನ ಅಭಿಪ್ರಾಯವಷ್ಟೆ.

(5 : 00 pm)

ಶ್ರೀ ಎ.ಎಸ್. ಬಸವರಾಜು :-- ಅಧಿಕಾರ ಅಲ್ಲೂ ಇರಬೇಕು, ಇಲ್ಲೂ ಇರಬೇಕು.

ಶ್ರೀ ಬಿ.ಆರ್. ಪಾಟೀಲ್ :-- ಒಂದು ಸಂಸ್ಥೆ ಇನ್ನೊಂದು ಸಂಸ್ಥೆಯ ಮೇಲೆ ಆರೋಪ ಮಾಡುವುದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಿಡಬೇಕು.

ಲೋಕಸಭೆಯವರು ನಮ್ಮನ್ನು ತಪ್ಪು ಎನ್ನುವುದು, ನಾವು ಜಿಲ್ಲಾ ಪಂಚಾಯತ್‌ನವರನ್ನು ತಪ್ಪು ಎಂದು ಹೇಳುವುದು, ಜಿಲ್ಲಾ ಪಂಚಾಯತ್‌ನವರು ಗ್ರಾಮ ಪಂಚಾಯತ್‌ನವರು ತಪ್ಪು ಎಂದು ಹೇಳುವುದು ಸರಿಯಲ್ಲ. ತಪ್ಪುಗಳು ಎಲ್ಲಾ ಕಡೆ ಇರಬಹುದು. ಆದರೆ, ಒಬ್ಬರಿಗೊಬ್ಬರು ಬೆರಳು ತೋರಿಸುತ್ತಾ ಹೋದರೆ ಹೇಗೆ? ಅವರೂ ಕೂಡ ಜನಪ್ರತಿನಿಧಿಗಳು, ಅವರೂ ಕೂಡ ಚುನಾಯಿತ ಪ್ರತಿನಿಧಿಗಳೇ ಆಗಿದ್ದಾರೆ. ಅವರೂ ಕೂಡ ಕಾನೂನಿನ ಮುಖಾಂತರ ಆರಿಸಿ ಬಂದು ಆ ಪಂಚಾಯಿತಿಯಲ್ಲಿ ಕುಳಿತವರಾಗಿದ್ದಾರೆ. ಅವರ ಬಗ್ಗೆ ನಾವು ಅನುಮಾನ ಪಡುವುದು, ಕೀಳು ದೃಷ್ಟಿಯಿಂದ ನೋಡುವುದು ಬಹಳ ತಪ್ಪಾಗುತ್ತದೆ. ಈ ವ್ಯವಸ್ಥೆಯಲ್ಲಿ ನಾವೆಲ್ಲರೂ ಕೂಡ ಒಬ್ಬರಿಗೊಬ್ಬರು ಮರ್ಯಾದೆ ಕೊಟ್ಟುಕೊಂಡು ಮಧ್ಯಮ ಮಾರ್ಗವನ್ನು ಕಂಡುಹಿಡಿಯಬೇಕು. ಮಾನ್ಯ ಸಚಿವರು ಸೂಕ್ಷ್ಮವಾಗಿ ಬಿಲ್ ತಂದಿದ್ದಾರೆ. ಏನೆಂದರೆ, ಗ್ರಾಮಸಭೆಯಲ್ಲಿ ಮಾಡಲಿಕ್ಕಾಗದಿದ್ದಾಗ ಅದನ್ನು ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಗೆ ತರಬೇಕೆಂದು ಹೇಳಿದ್ದಾರೆ. ಅಲ್ಲಿಯೂ ಕೂಡ ಅಲ್ಲಗೆಳೆದಿಲ್ಲ. ಗ್ರಾಮ ಸಭೆಗಳು ಆಗುವುದಿಲ್ಲ ಎನ್ನುವ ಪರಿಸ್ಥಿತಿ ಇರುವಾಗ ಆಗ ಶಾಸಕರ ಅಧ್ಯಕ್ಷತೆಯಲ್ಲಿ ಈ ಆಶ್ರಯ ಸಮಿತಿಗೆ ಬರುತ್ತದೆ ಎನ್ನುವ ತಿದ್ದುಪಡಿ ತಂದಿದ್ದಾರೆ. ಆದ್ದರಿಂದ, ನಾನು ಇವತ್ತು ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ನಾವು ಇವತ್ತು ಫಲಾನುಭವಿಗಳಿಗೆ ಮನೆಗಳನ್ನು ಹಂಚಿಲ್ಲ. ಹಿಂದೆ, ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಈ ರಾಜ್ಯದಲ್ಲಿ 70,000 ಮನೆಗಳನ್ನು ಬೇರೆ ಬೇರೆ ಕಾರಣಕ್ಕಾಗಿ ಹಂಚಲಿಕ್ಕೆ ಆಗಲಿಲ್ಲ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ರಾಜ್ಯದಲ್ಲಿ 70,000 ಮನೆಗಳು ಹಂಚಿಕೆಯಾಗದೆ ಹಾಗೆಯೇ ಉಳಿದಿವೆ. ಅದನ್ನು ಮಾಡಬೇಕೆಂದು ಹೇಳಿದ್ದೆವು. ಅದೂ ಕೂಡ ಆಗಲಿಲ್ಲ. ಹಾಗಾಗಿ, ಇವತ್ತು ಫಲಾನುಭವಿಗಳಿಗೆ ಮನೆಗಳನ್ನು ಹಂಚಬೇಕಾಗಿದ್ದರೆ ಎಲ್ಲ ಶಾಸಕ ಮಿತ್ರರಿಗೆ ನಾನು ಒಂದು ಅನುಭವದ ಮಾತು ಹೇಳುತ್ತೇನೆ. ಏನೆಂದರೆ, ನಾವು ಎಲ್ಲದಕ್ಕೂ ಕೂಡ individual ಆಗಿ ಹಂಚುವುದಕ್ಕೆ ಹೋದರೆ ಒಬ್ಬರಿಗೆ ಹಂಚುವುದಕ್ಕೆ ಹೋದರೆ 20 ಜನ ವಿರೋಧ ಆಗುತ್ತಾರೆ. ಇದನ್ನು ಕೂಡ ನಾವು ಅರ್ಥ ಮಾಡಿಕೊಳ್ಳಬೇಕು. ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳದೇ ಗ್ರಾಮಪಂಚಾಯತ್‌ಗೆ ಸಂಪೂರ್ಣ ಅಧಿಕಾರ ಕೊಡಬೇಕು. ಇಲ್ಲವೆಂದರೆ, computer ಗೆ feed ಮಾಡಿ ಯಾರ್ಯಾರು ಅರ್ಹರಿರುತ್ತಾರೆ ಅವರಿಗೆ ಹಂಚಿ ಮನೆಗಳನ್ನು ಕಟ್ಟಿಸಿಕೊಡುವಂಥ ವ್ಯವಸ್ಥೆಯನ್ನು

ಮಾಡಿದರೆ ಈ ಮನೆಗಳ ಹಂಚಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. Vigilance Committee ಏನು ಮಾಡಿದ್ದಾರೆ ಅದಕ್ಕೂ ಕೂಡ ಮನೆಗಳನ್ನು ಹಂಚುವ ಅಧಿಕಾರವಿಲ್ಲ. ನಾವು ಮತ್ತೆ ಗ್ರಾಮಸಭೆಗೆ ಕಳುಹಿಸಿಕೊಡಬೇಕು. 6 ಸಲ ನಾನೇ ಕಳುಹಿಸಿದ್ದೇನೆ. ಆ ಗ್ರಾಮ ಸಭೆ ಆಗಲೇ ಇಲ್ಲ. ಮನೆಗಳನ್ನು ಹಂಚುವುದಕ್ಕೆ ಆಶ್ರಯ ಸಮಿತಿ ತರಬೇಕೆಂದು ಹೇಳುವ ಒತ್ತಾಯದ ಹಿನ್ನೆಲೆಯಲ್ಲಿ ಏನು ತಿದ್ದುಪಡಿ ತಂದಿದ್ದಾರೆ ಇದನ್ನು ಇನ್ನೂ ಸ್ವಲ್ಪ ಪರಿಪಕ್ವವಾಗಿ ತಂದು ತಕ್ಷಣ ಮನೆಗಳನ್ನು ಹಂಚುವ ಕೆಲಸಕ್ಕೆ ಮಂತ್ರಿಗಳು ಮುಂದಾಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ) :- ಮಾನ್ಯ ಉಪಾಧ್ಯಕ್ಷರೆ, ಅಧಿಕಾರ ವಿಕೇಂದ್ರಿಕರಣ ವಿರೋಧ ಮಾಡುತ್ತಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳಿದರು. ನಾವ್ಯಾರು ಅಧಿಕಾರ ವಿಕೇಂದ್ರೀಕರಣಕ್ಕೆ ವಿರೋಧವಿಲ್ಲ. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಮಗೆ ಗೌರವವಿದೆ. ನಾವೂ ಸಹ ಚುನಾಯಿತ ಪ್ರತಿನಿಧಿಗಳು. ಇವತ್ತು bill ತಂದು ಈ ತಿದ್ದುಪಡಿಯನ್ನು ತಂದಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಮಾತನಾಡುತ್ತಾ ಹೇಳಿದರು. ಶಾಸಕರ ನೇತೃತ್ವದಲ್ಲಿ Vigilance Committee ಇದೆ. ಗ್ರಾಮಸಭೆಯಿಂದ ಏನು ಪಟ್ಟಿ ಮಾಡಿ ಕಳುಹಿಸುತ್ತಾರೆ, ಬಹುಶಃ ಆ ಪಟ್ಟಿಯಿಂದ ಆ ಮನೆಯನ್ನು ತೆಗೆದು ಹಾಕಬಹುದು. ಬಹುಶಃ ಆ ಮನೆಯನ್ನು ತೆಗೆದುಹಾಕಿದಾಗ ಅಲ್ಲಿರತಕ್ಕಂಥ ಗ್ರಾಮ ಪಂಚಾಯತ್‌ನವರು, ಏನು ಶಾಸಕರೆ, ನಮ್ಮ ಹೆಸರಿಗೆ ಬಂದ ಮನೆಯನ್ನು ತೆಗೆದುಹಾಕಿದ್ದೀರಿ ಎಂದು ಕೇಳುತ್ತಾರೆ. ಆ ರೀತಿ ಜನರನ್ನು ಎತ್ತಿ ಕಟ್ಟುವ ಕೆಲಸವಾಗುತ್ತದೆ. ಆ ಕಾರಣಕ್ಕೋಸ್ಕರ ಈ Vigilance Committee ಯಿಂದ ನಮಗೆ ಯಾವುದೇ ಅಧಿಕಾರ ಇಲ್ಲ. ನಮ್ಮ ಹಳ್ಳಿಯಲ್ಲಿ, ಶಾಲೇಯೇ ಇಲ್ಲ, ಸಂಬಳವೇ ಇಲ್ಲ, ನನ್ನ ಗಂಡ ಜಮೇದಾರ ಎನ್ನುವ ಒಂದು ಗಾದೆ ಇದೆ. ಆ ರೀತಿ ಶಾಸಕರ ಪರಿಸ್ಥಿತಿಯಾಗಿದೆ. ಆ ಕಾರಣಕ್ಕೋಸ್ಕರ ಶಾಸಕರ ಅಧ್ಯಕ್ಷತೆಯಲ್ಲಿ ಮನೆಗಳ ಹಂಚುವ ಕೆಲಸ ಆಗಬೇಕು. ಇದರ ಜೊತೆಗೆ ಅಧಿಕಾರಿಗಳು ಬಹಳ ದೊಡ್ಡ ತಪ್ಪು ಮಾಡಿದ್ದಾರೆ.

ನನ್ನ ತಾಲ್ಲೂಕಿನಲ್ಲಿ ನ್ಯಾಮತಿ ಎನ್ನುವ ಗ್ರಾಮ ಪಂಚಾಯಿತಿಯಲ್ಲಿ 9,992 ಜನಸಂಖ್ಯೆ ಇದೆ. ಇಂಥ ಗ್ರಾಮ ಸಭೆಗೆ 60 ಮನೆಗಳು. ಬಸವನಹಳ್ಳಿ ಗ್ರಾಮ ಪಂಚಾಯಿತಿ 2000 ಜನ ಇಲ್ಲ, ಆ ಗ್ರಾಮಕ್ಕೂ 60 ಮನೆಗಳು. ಈ ಅಧಿಕಾರಿಗಳು ಯಾವ ರೀತಿ ನಿರ್ಣಯ ಮಾಡುತ್ತಾರೆ? ಈ ಮಾನದಂಡವನ್ನು ಉಪಯೋಗಿಸಿದರೆ

ಅಲ್ಲಿರುವ ಜನಗಳಿಗೆ ಸಾಕಷ್ಟು ತೊಂದರೆಯಾಗುತ್ತದೆ. ಆ ಕಾರಣಕ್ಕಾಗಿ ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ತಿಳಿಸಿದರು. ಇಡೀ ತಾಲ್ಲೂಕಿನಲ್ಲಿ ಎಷ್ಟು ಮನೆಗಳು ಬರುತ್ತವೆ, ಆ ರೀತಿಯ ಮನೆಗಳ ಪಟ್ಟಿ ಮಾಡಿ ತಾಲ್ಲೂಕಿಗೆ ಕೊಡಬೇಕು. ಅಲ್ಲಿ ಜನಸಂಖ್ಯೆ ಆಧಾರದ ಮೇಲೆ ಯಾವ ವರ್ಗದ ಜನರು ಇದ್ದಾರೆ, ಅದರ ಮಾನದಂಡವನ್ನು ಉಪಯೋಗಿಸಿ ಶಾಸಕರ ನೇತೃತ್ವದಲ್ಲಿ ಕಾರ್ಯಪಡೆ ರಚನೆಯಾಗಬೇಕು. ಯಾವುದೇ ಕಾರಣಕ್ಕೂ ಈ ರೀತಿಯಾಗಿ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಇತರ ನಾಯಕರು ತಿಳಿಸಿದ ಹಾಗೆ ಇದರಲ್ಲಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಬೇಕು. ಅಲ್ಲಿರತಕ್ಕಂಥ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳು ಈ ಗ್ರಾಮಪಂಚಾಯಿತಿಯನ್ನು ಹಾಳು ಮಾಡತಕ್ಕಂಥ ವ್ಯವಸ್ಥೆ ಮಾಡುತ್ತಾರೆ. ಬಹುಶಃ ಎಸ್‌ಸಿ--ಎಸ್‌ಟಿ ಇರಬಹುದು, ಮಹಿಳೆಯರು ಇರಬಹುದು, ಮೀಸಲಾತಿಯನ್ನು ನಾವು ಸ್ವಾಗತಿಸುತ್ತೇವೆ. ಆದರೆ ಅಲ್ಲಿ ಅನೇಕ ಅನಕ್ಷರಸ್ಥರು ಇದ್ದಾರೆ. ಈ ಕಾರ್ಯದರ್ಶಿಗಳು ಅವರ ಅಧಿಕಾರವನ್ನು ದುರ್ಬಳಕೆ ಮಾಡಿ ಅಧ್ಯಕ್ಷರ ಸಹಿ ಮಾಡಿಸುವುದು, ಅಲ್ಲಿ ಆಗತಕ್ಕಂಥ ಭ್ರಷ್ಟಾಚಾರಕ್ಕೆ ಕಾರಣವಾಗಿಸುವುದು. ಆ ಕಾರಣಕ್ಕಾಗಿ ಶಾಸಕರ ನೇತೃತ್ವದಲ್ಲಿ ಕಾರ್ಯಪಡೆ ರಚನೆಯಾಗಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಾ, ಕಾರ್ಯಪಡೆ ಎಂದರೆ, ಆಶ್ರಯ ಸಮಿತಿ ರಚನೆಯಾಗಬೇಕೆಂದು ತಮ್ಮ ಮೂಲಕ ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ನಾನೇ ಈ ಡಿಬೇಟ್ ಅನ್ನು ಪ್ರಾರಂಭಿಸಿದ್ದೆ. ನಾನು ಮಾತನಾಡುವಾಗ ಮಧ್ಯದಲ್ಲಿ ಬೇರೆಯವರು ಮಾತನಾಡಿದರು, ತಾವು ಕೂಡ ಬೇರೆಯವರಿಗೆ ಅವಕಾಶ ಕೊಡೋಣ ಎಂದು ಹೇಳಿದಿರಿ, ನಾನೂ ಕೂಡ ಸುಮ್ಮನಾದೆ. ನಾನು ಈ ಮೊದಲು ಹೇಳಿದ್ದನ್ನು ಪುನರುಚ್ಚರಿಸುತ್ತೇನೆ. ಈ ಒಂದು ಬಿಲ್‌ನಿಂದ ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಲಿ ಪೆಟ್ಟು ಬಿದ್ದ ಹಾಗೆ ಆಗುತ್ತದೆ. ಏಕೆ ಎಂದು ಕೂಡ ನಾನು ಹೇಳುತ್ತೇನೆ. ಸುಮ್ಮನೆ ಆರೋಪಿಸಿ ರಾಜಕೀಯಕ್ಕೋಸ್ಕರ ಈ ಮಾತುಗಳನ್ನು ಹೇಳುತ್ತಿಲ್ಲ. ಮಾನ್ಯ ಸಚಿವರು ಬಹಳ ಹಿರಿಯರಾಗಿದ್ದಾರೆ. ಅವರು ಒಂದು ಮಾತಜು ಹೇಳಿದ್ದರು, ನಿಮ್ಮ ವಿರುದ್ಧ ನಿಮ್ಮ ಸರ್ಕಾರ ಎಂದು ಹೇಳಿ ವೈಯಕ್ತಿಕವಾಗಿ ಟೀಕೆ ಮಾಡುತ್ತಿಲ್ಲ. ಏಕೆಂದರೆ ತಾವು ಬಹಳ ಹಿರಿಯ ಸದಸ್ಯರು ಇದ್ದೀರಿ. ತಮಗೂ ಗೊತ್ತಿದೆ. ತಾವು ಇವತ್ತು ಈ objects ನಲ್ಲಿ ನೋಡಬಹುದು. Objects and reasons ನಲ್ಲಿ ನೀವು ಏನು ಹೇಳಿದಿರಿ, ಈ ಒಂದು ಬಿಲ್ ಅನ್ನು ತರಲಿಕ್ಕೆ " The Gram

Panchayats have not been functioning effectively" ನೀವು ಯಾವ ಆಧಾರದ ಮೇಲೆ ಈ ನಿರ್ಣಯಕ್ಕೆ ಬಂದಿದ್ದೀರಿ? ಅಂದರೆ ಪಂಚಾಯತ್ ರಾಜ್ ವ್ಯವಸ್ಥೆ ಕೂಡ ಜನರಿಂದ ಚುನಾಯಿತರಾಗಿರತಕ್ಕಮಥ ಒಂದು ಸಂಸ್ಥೆ. ನಾವು ಹೇಗೆ ಶಾಸಕರಾಗಿದ್ದೇವೆ, ಅವರು ಪಂಚಾಯತ್ ಮೆಂಬರ್ ಆಗಿದ್ದಾರೆ. ಅದಕ್ಕೆ ಪ್ರತ್ಯೇಕವಾದಂಥ ವ್ಯವಸ್ಥೆಯಿದೆ. ಅದು ಸಂವಿಧಾನಬದ್ಧವಾಗಿರತಕ್ಕಂಥ ಸಂಸ್ಥೆ. ನಾವು ಶಾಸಕರಾಗಿ ಪಂಚಾಯಿತಿ ವ್ಯವಸ್ಥೆಯ ಮೇಲೆ, You are casting aspersion on this institute itself, which is a creation of the Constitution. ಅದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ :- No, No, No. I am sorry. You are misleading the House.

(ಗೊಂದಲ)

ಉಪಾಧ್ಯಕ್ಷರು :- ಮಾಧುಸ್ವಾಮಿಯವರೆ ಅವರು ಮುಗಿಸಲಿ ಬಿಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಹೇಳಿ ಇದರಲ್ಲಿ ಕ್ರಿಯಾಲೋಪ ಇದ್ದರೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇಲ್ಲ He cannot. Constitution ಗೆ ವಿರುದ್ಧವಾಗಿ ಹೋಗುತ್ತಿದ್ದೇವೆ, casting aspersions on Constitution ಎಂದು ಹೇಳಿದರೆ ನಾವು ಕುಳಿತುಕೊಂಡು ಕೇಳುವುದಕ್ಕೆ ಆಗುತ್ತದೆಯೇ?

(ಗೊಂದಲ)

ಉಪಾಧ್ಯಕ್ಷರು :- ಏನು ಹೇಳಿದರು?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಅವರು ಯಾವ ಕ್ರಿಯಾಲೋಪದ ಮೇಲೆ ಹೇಳಿದ್ದಾರೆ ಅದನ್ನು ಅವರು ಹೇಳಲಿ. Let him explain. I stand by my word.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- Let him quote. ಗ್ರಾಮ ಪಂಚಾಯಿತಿಗೆ ಮನೆ ಕೊಡುವುದಕ್ಕೆ ಯಾವ ಅಧಿಕಾರವಿದೆ ಎಂದು ಯಾವ ಶಾಸನದಲ್ಲಿ ಇದೆ? Only Grama Sabha is empowered. Why he is talking on behalf of Grama Panchayat?

(**ಗೊಂದಲ**)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- No, No, No. ಮಾನ್ಯ ಸದಸ್ಯರು, ಮಾನ್ಯ ಅಧ್ಯಕ್ಷರೆ ನಿಮ್ಮ ಮುಖಾಂತರ ನಾವು ಇದನ್ನು objection ಮಾಡುತ್ತೇನೆ. ಏಕೆಂದರೆ, ಮಾನ್ಯ ಸದಸ್ಯರು ಕ್ರಿಯಾಲೋಪ ಎತ್ತಿದ್ದಾರೆ. ಯಾವ ಆಧಾರದ ಮೇಲೆ ಕ್ರಿಯಾಲೋಪ ಎತ್ತಿದ್ದಾರೆಂದು ಹೇಳಲಿ. ನಾನು ಹೇಳಿರತಕ್ಕಂಥ ಮಾತು ಇವತ್ತು ಅದು ಯಾವುದೇ ಕಾನೂನು ಬದ್ಧವಾಗಿಲ್ಲವೆಂದು ಹೇಳಲಿ. ನಾನು ಹೇಳುವುದು ಸತ್ಯವಿದೆ. I stand by my word. You are casting aspersions on the institute, which is created by the Constitution. 73rd amendment ಮಾಡಿದ ಮೇಲೆ ಪಂಚಾಯತ್ ರಾಜ್ ವ್ಯವಸ್ಥೆಯೂ ಕೂಡ ಗ್ರಾಮ ಪಂಚಾಯಿತಿಯಾಗಲೀ, ತಾಲ್ಲೂಕು ಪಂಚಾಯಿತಿಯಾಗಲೀ, ಜಿಲ್ಲಾ ಪಂಚಾಯಿತಿಯಾಗಲಿ, ಅವುಗಳು ಕೂಡ ಸಂವಿಧಾನಬದ್ಧವಾಗಿರತಕ್ಕಂಥ ಸಂಸ್ಥೆಗಳು. ನೀವು ಬಿಲ್‌ನಲ್ಲಿ object ನಲ್ಲಿ ಹೇಳಿದಿರಿ. ನೀವು ಕ್ಲ್ಯಾರಿಫೈ ಮಾಡುತ್ತೇನೆಂದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಈಗ ಸುಮ್ಮನೇ ವಾದ ಮಾಡಲಿಕ್ಕಾಗಿಯೇ ವಾದ ಮಾಡಲಿಕ್ಕೆ ಹೋಗಬೇಡಿ. ಈಗ ಸುಮ್ಮನೆ ವಾದ ಮಾಡುವುದರ ಸಲುವಾಗಿ ವಾದ ಮಾಡುವುದು ಸರಿಯಲ್ಲ. ಮಾನ್ಯ ಮಾಧುಸ್ವಾಮಿಯವರು ಅಕ್ಷೇಪಣೆ ಮಾಡಿದ್ದರಲ್ಲಿ ಸರಿಯಿದೆ. ಪಂಚಾಯತ್‌ಗೆ ಅಧಿಕಾರ ಇದೆ ಎನ್ನುವ ಮಾತನ್ನು ಹೇಳಿದರು. ಸೆಕ್ಷನ್ 3 ನಲ್ಲಿ Ward Sabha ಎಂದು ಸ್ಪಷ್ಟವಾಗಿ ಹೇಳಿದ್ದಾರೆ. "To identify the most eligible persons from the area of Ward Sabha for beneficiary oriented schemes on the basis of criteria fixed and prepare list of eligible beneficiates in the order of priority and forward the same to the Grama Panchayat for inclusion in its development plan" ಇಷ್ಟು ಇದೆ. ಆದರೆ ಮನೆಗಳನ್ನು ಕೊಡಬೇಕಾದರೆ, identification

ಮಾಡುವುದೇನಿದೆ, identification ಗೆ ಅಧಿಕಾರವಿರುವುದು ಎಲ್ಲಾ ಸಂಪೂರ್ಣವಾಗಿ ಅಲ್ಲೆ. ಪ್ರಶ್ನೆ ಎಲ್ಲಿ ಬರುತ್ತಿತ್ತು? ಇಲ್ಲಿಯವರೆಗೆ ಗ್ರಾಮ ಸಭೆಯೊಳಗೆ ಬಲಿಷ್ಠರು ಅಕಸ್ಮಾತ್ ಆ ಯಾದಿಯಲ್ಲಿ ಸೇರಿದ್ದರೆ ಸಲಹೆಗಳು ಬಂದ ರೀತಿಯಲ್ಲಿ ಅವುಗಳನ್ನು ತೆಗೆದುಹಾಕಲಿಕ್ಕೆ ಹೋದಂಥ ಸಂದರ್ಭದಲ್ಲಿ ಗಲಾಟೆಗಳಾಗುತ್ತಿವೆ, ಯಾರು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಒಂದು ವೇಳೆ ಅರ್ಹ ಫಲಾನುಭವಿಗಳನ್ನು ಲಾಟರಿ ಮೂಲಕ ಎತ್ತಬೇಕಾಗಿದ್ದರೆ ಈಗಾಗಲೇ ಅವಕಾಶವಿದೆ. ಆದರೆ ಇವತ್ತಿನವರೆಗೆ ಅದನ್ನು ಜಾರಿ ಮಾಡುವುದಕ್ಕೆ ಸಾಧ್ಯವಾಗಿಲ್ಲದೇ ಇರುವುದಕ್ಕಾಗಿಯೇ ಈ ಕಾನೂನು ತಂದು ತಿದ್ದುಪಡಿ ತರುವಂಥ ಅವಶ್ಯವಿದೆ. ಇಲ್ಲದೇ ಹೋದರೆ ಬೇಕಾಗಿರಲಿಲ್ಲ. ಅಲ್ಲಿ ಲಾಟರಿ ಮೂಲಕ selection ಆಗುತ್ತಿದ್ದರೆ, ಇವತ್ತು ಯಾರು ಇದನ್ನು ಬೇಕೆಂದು ಅಪೇಕ್ಷೆ ಮಾಡುತ್ತಿರಲಿಲ್ಲ. ಅಲ್ಲಿ ಏನಾಗಿದೆ, ಬಲಿಷ್ಠರದೇ ಬಾಯಿ ನಡೆಯುತ್ತಿದೆ ಎನ್ನುವ ಮಾತು ಎಲ್ಲ ಬಾಯಿಂದ ಬಂದಾಗ, ಮಾನ್ಯ ಬಿ.ಆರ್. ಪಾಟೀಲ್‌ರವರು ಮೊದಲು ಹೇಳಿದರು. ಎಲ್ಲಿ ಗ್ರಾಮ ಸಭೆಗಳು ನಡೆಯುತ್ತವೆಂದು ಹೇಳಲಿಕ್ಕೆ ತಯಾರಿಲ್ಲ. ಇವರು ಹೇಳುವಂಥ ಮಾತುಗಳನ್ನು ಇಲ್ಲಿಯವರೆಗೆ ಇದೆ. ಕಾನೂನಿನಲ್ಲಿ ಏನು ಇದೆ, ಯಾವುದೇ ಪ್ಲ್ಯಾನ್ ಮಾಡಬೇಕಾದರೆ, ಗ್ರಾಮ ಸಭೆಗಳಲ್ಲಿಯೇ ನೀವು ಪ್ಲ್ಯಾನ್ ಮಾಡಬೇಕೆಂದು ಇದೆ. ಇವತ್ತಿನವರೆಗೆ ಯಾವ ಗ್ರಾಮಸಭೆಗಳಲ್ಲಿ ಪ್ಲ್ಯಾನ್ ಮಾಡಿದ್ದಾರೆ? SJRY Scheme ಬಂದರೆ ಒಂದು ಲಕ್ಷ ರೂಪಾಯಿನವರೆಗೂ ತಾಂತ್ರಿಕ ಅನುಮೋದನೆ ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ಗ್ರಾಮ ಸಭೆ ಕೊಡಬೇಕು. ಅದೇ ಅಂತಿಮ ಎಂದು ಇದೆ. ಇದನ್ನು ಯಾರು ಮಾಡಿದ್ದಾರೆ? ಇಲ್ಲಿಯವರೆಗೆ ಇದರಲ್ಲಿ ಕೊಟ್ಟದ್ದಾರೆ. ಪ್ಲ್ಯಾನ್ ಮಾಡಬೇಕಾದಾಗ ಏನು ಮಾಡಬೇಕು ಎನ್ನುವುದನ್ನು ಗ್ರಾಮಸಭೆಯೊಳಗೆ ಮಾಡಬೇಕೆಂದು specific ಆಗಿ ಕೊಟ್ಟಿದ್ದರೂ ಸಹ ಇದುವರೆಗೆ ಮಾಡುವುದಕ್ಕೆ ಆಗಿಲ್ಲ. "The Grama Sabha shall in its ordinary meeting or a special meeting convened for the purpose, discuss the budgetary provisions, the details of plan outlay and the subject wise allocation of funds and also the details of the estimate and cost of materials of the works executed or proposed to be executed in the Panchayat area." ಗ್ರಾಮ ಸಭೆಗೆ ಈ ಅಧಿಕಾರ ಇದೆ. ಇದುವರೆಗೆ ಯಾರು ಮಾಡಿದ್ದಾರೆ?

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಸಚಿವರೆ ನಮಗೆ ಅದು ಅರ್ಥವಾಗುವುದಿಲ್ಲ. ಕನ್ನಡದಲ್ಲಿ ಹೇಳಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ್ :- ನೀವು intermediate ಓದಿದ್ದೀರಿ ನಿಮಗೆ ಅರ್ಥವಾಗುವುದಿಲ್ಲವೆಂದರೆ ಹೇಗೆ? ಅವರು ಬರಿ 8 ನೇ ತರಗತಿ ಓದಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ನಮಗೆ ಅದನ್ನು ಕನ್ನಡದಲ್ಲಿ ಅರ್ಥ ಮಾಡಿ ಹೇಳಿ. ನಮಗೆ ತಿಳಿಯುತ್ತಿಲ್ಲ. ಸುವರ್ಣ ಕರ್ನಾಟಕದಲ್ಲಿ ಇವರು ಹೀಗೆ ಮಾಡಿದರೆ ಹೇಗೆ?

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನಾನು ಒಂದು ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ. ನಾನು ಏಕೆ ಈ ಮಾತು ಹೇಳಿದೆ ಎಂದರೆ, ಈಗ ತಾನೇ ಸಚಿವರು ಏನು ಕ್ಲ್ಯಾರಿಫಿಕೇಶನ್ ಕೊಟ್ಟರು, ಅದಕ್ಕೆ ನಾನು ಆಮೇಲೆ ಬರುತ್ತೇನೆ. ಅಂದರೆ ನಾನು objects ನ್ನು ಓದುತ್ತಿದ್ದೇನೆ. ನೀವು ಹೇಳಿದ್ದಕ್ಕೆ ನಾನು ಆಮೇಲೆ ಬರುತ್ತೇನೆ. ಗ್ರಾಮ ಸಭೆಯಿಂದ ಅಧಿಕಾರ ಕಿತ್ತುಕೊಂಡಿಲ್ಲವೆಂದು ಹೇಳಿದಿರಿ. ಅದಕ್ಕೆ ನಾನು ಆಮೇಲೆ ಬರುತ್ತೇನೆ. ನಾನು ಈ ಮಾತನ್ನು ಏಕೆ ಹೇಳಿದೆ ಎಂದರೆ, you are casting aspersions. Objects ನಲ್ಲಿ ತಾವು ಹೇಳಿದಿರಿ. ಮಾನ್ಯ ಸಚಿವರು ಬಿಲ್ ನೋಡಬೇಕು. ಏನು ಹೇಳಿದಿರಿ, "The Grama Panchayat have not been functioning effectively." You cannot. ಈಗ ಏನಾಗುತ್ತದೆ, ಮೇಲಸ್ತರದಲ್ಲಿರುವ ಒಂದು ಸಂಸ್ಥೆ ಗ್ರಾಮ ಪಂಚಾಯಿತಿ ಈ ರಾಜ್ಯದಲ್ಲಿ 80 ಸಾವಿರ ಚುನಾಯಿತ ಪ್ರತಿನಿಧಿಗಳು ಇದ್ದಾರೆ. ನೀವು ಅವರನ್ನು ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು vague ಆಗಿ generalize ಆಗಿ ಇಡೀ ಸಂಸ್ಥೆಗೆ ಕೊಡಲಿ ಪೆಟ್ಟು ಬೀಳತಕ್ಕಂಥ ರೀತಿಯಲ್ಲಿ ನೀವು ಹೇಳಿದರೆ ಅದು ತಪ್ಪಾಗುತ್ತದೆ. ನೀವು ಬಿಲ್ ನಲ್ಲಿ ಏನು ತಂದಿದ್ದೀರಿ ಅದರ ಮೇಲೆ ಚರ್ಚೆಗೆ ನಾನು ಆಮೇಲೆ ಬರುತ್ತೇನೆ. ಆದರೆ ನೀವು ಈ ರೀತಿ objects ನಲ್ಲಿ ಹೇಳಬಾರದಾಗಿತ್ತು. ಏನೆಂದರೆ, They have not been functioning effectively ಎಂದರೆ, ಇದು ಬಹಳ generalize ಆಗಿದೆ. ನೀವು ಏನು ಸರ್ವೆ ಮಾಡಿಸಿದ್ದೀರಾ? ನಮ್ಮ ರಾಜ್ಯದಲ್ಲಿ 5000 ಗ್ರಾಮ ಪಂಚಾಯಿತಿಗಳಿವೆ. ಯಾವ್ಯಾವ ಗ್ರಾಮ ಪಂಚಾಯಿತಿ

ಇವತ್ತು ಚೆನ್ನಾಗಿ ಕೆಲಸ ಮಾಡುತ್ತದೆ ಎನ್ನುವ ಪಟ್ಟಿ ನಿಮ್ಮ ಹತ್ತಿರ ಇದೆಯೇ? ನೀವು ಏನಾದರೂ explanation call ಮಾಡಿದ್ದೀರಾ?

ಶ್ರೀ ಎಸ್.ಎಂ. ಯಾದವಾಡ :- ಶಾಸಕರು ಕ್ಷೇತ್ರದಲ್ಲಿ ಕೇಳಬಹುದಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೇ ನಾನು ಮಾತನಾಡುತ್ತಿದ್ದೇನೆ, ದಯಮಾಡಿ ನನಗೆ ರಕ್ಷಣೆ ಕೊಡಬೇಕು. ನಾನು ಹೇಳತಕ್ಕಂಥದ್ದು ಇಷ್ಟೇ. ಈ ಬಿಲ್‌ನಲ್ಲಿ ಕೆಲವು ತಿದ್ದುಪಡಿಗಳ ಬಗ್ಗೆ ಹೇಳಿದ್ದಾರೆ. ಗ್ರಾಮ ಸಭೆಗಳು ವಿಫಲವಾದಲ್ಲಿ ಬೇರೆ ಸಮಿತಿಯನ್ನು ರಚಿಸಬೇಕೆಂದು ತಾವು ಬಿಲ್ ನಲ್ಲಿ ಹೇಳಿದಿರಿ. ನಾನು ಇಲ್ಲವೆಂದು ಹೇಳಿಲ್ಲ. ಆದರೆ, objects ನಲ್ಲಿ ತಪ್ಪಾಗಿ ಹೇಳಿದ್ದೀರಿ ಅದನ್ನು ತಿದ್ದುಪಡಿ ಮಾಡಬೇಕು. ಯಾವುದೇ ಒಂದು ಹೊಸ ವ್ಯವಸ್ಥೆ ಮಾಡುವಾಗ ಬೇಲೂರು ಘೋಷಣೆ ಮೂಲಕ ಆಗಿರಬಹುದು, 73 ನೇ ತಿದ್ದುಪಡಿಯಾದ ಮೇಲೆ ರಾಜೀವ್‌ಗಾಂಧಿಯವರು ಸಂವಿಧಾನಕ್ಕೆ ತಿದ್ದುಪಡಿ ತಂದ ಮೇಲೆ ನಮ್ಮ ರಾಜ್ಯದಲ್ಲಿ ನಜೀರ್ ಸಾಬ್‌ರವರು ಕೂಡ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬಹಳಷ್ಟು ದೃಢ ಸಂಕಲ್ಪದಿಂದ ಅಧಿಕಾರ ವಿಕೇಂದ್ರೀಕರಣ ಮಾಡಿದ್ದರು. ಇವತ್ತು ನಾವೆಲ್ಲರೂ ಅದನ್ನು ಮಾಡಬೇಕು. ಏಕೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂಬುದನ್ನು ಇವತ್ತು ಚರ್ಚೆಯಾಗಬೇಕಾಗಿದೆ. ವಿಧಾನ ಸಭೆಗಳಾಗಲೀ, ಲೋಕಸಭೆಗಳಾಗಲೀ, ಜಿಲ್ಲಾ ಪಂಚಾಯತ್‌ಗಳಾಗಲೀ, ತಾಲ್ಲೂಕು ಪಂಚಾಯತ್‌ಗಳಾಗಲೀ, ಅದರ ಪ್ರಕಾರ ನಾವು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದರ ಮುಖಾಂತರ ನಾಗರೀಕ ಸಮಾಜವನ್ನು ನಿರ್ಮಾಣ ಮಾಡತಕ್ಕಂಥದ್ದು ಪ್ರಜಾಪ್ರಭುತ್ವದಲ್ಲಿ ನಮ್ಮೆಲ್ಲರ ಪ್ರಯತ್ನವಾಗಿರಬೇಕು ಎಂದು ನಾನು ತಿಳಿದುಕೊಂಡಿದ್ದೇನೆ.

ಇವತ್ತು ಮುಖ್ಯ ಉದ್ದೇಶ ಏನಿತ್ತು? ಗ್ರಾಮ ಸಭೆಯಲ್ಲಿ ಇವತ್ತಿನ ದಿವಸ ಸರಿಯಾದಂಥ ನಿರ್ಣಯಗಳು ಆಗುತ್ತಿಲ್ಲವೆಂಬ ವಾದವನ್ನು ಈಗಾಗಲೇ ಮಾನ್ಯ ಹಿರಿಯ ಸದಸ್ಯರು ಮಾಡಿದ್ದಾರೆ. ಒಂದು ಗ್ರಾಮದಲ್ಲಿ ಎಲ್ಲಾ ಜಾತಿಯ ಜನರು ಸೇರಿ ಒಂದು ನ್ಯಾಯ ಬದ್ಧವಾದಂಥ ನಿರ್ಣಯಕ್ಕೆ ಬರತಕ್ಕಂಥದು ನಮ್ಮ ಕನಸಾಗಿದೆ. ಯಾವುದೇ ಒಂದು ನಾಗರೀಕ ಸಮಾಜ, ಪ್ರಜಾಪ್ರಭುತ್ವದ ಬಗ್ಗೆ ಇವತ್ತಿನ ದಿವಸ ಯಾವುದಾದರೊಂದು ಕನಸನ್ನು ಕಾಣಬೇಕಾಗುತ್ತದೆ. ಯಾವುದೇ ಒಂದು ಹಳ್ಳಿ, ಗ್ರಾಮ, ವಾರ್ಡ್‌ನಲ್ಲಿರತಕ್ಕಂಥ ಜನರೆಲ್ಲರೂ ಸೇರಿ ಇವತ್ತಿನ ದಿವಸ ಯಾವುದಾದರೊಂದು ನ್ಯಾಯಬದ್ಧವಾದಂಥ ಸಮಂಜಸವಾದಂಥ ನಿರ್ಣಯಕ್ಕೆ

ಬಂದರೆ ಅವತ್ತಿನ ದಿವಸ ನಮ್ಮ ಈ ಪ್ರಜಾಪ್ರಭುತ್ವ ಸಾರ್ಥಕವಾಗುತ್ತದೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆ ಒಂದು ನಿಟ್ಟಿನಲ್ಲಿ ಈ ಪ್ರಯತ್ನ ಇದೆ. ಇಲ್ಲಿ ಎಲ್ಲಾ ಸರಿ ಇದೆ ಎಂದು ನಾನು ಹೇಳುವುದಿಲ್ಲ. ಆದರೆ, ನೀವು ಯಾವಾಗ ಮಾಡುತ್ತೀರಿ? ನಮಗೆ ಸ್ವಾತಂತ್ರ್ಯ ಬಂದು 60 ವರ್ಷಗಳಾಯಿತು. ಈಗಲೂ ಕೂಡ ಒಂದು ಗ್ರಾಮ ಸಭೆಯಲ್ಲಿರತಕ್ಕಂಥ ಬಲಿಷ್ಠರು ಬಡವರಿಗೆ ಮತ್ತು ಮನೆ ಇಲ್ಲದವರಿಗೆ ಮತ್ತು ಯಾರು ನಿಶಕ್ತರಾಗಿದ್ದಾರೆಯೋ ಅವರಿಗೆ ಮತ್ತು ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ಕಡೆಗಣಿಸುತ್ತಿದ್ದಾರೆ. ಇವತ್ತು ಬಡವರಿಗೆ ಮನೆ ಕೊಡತಕ್ಕಂಥ ಶಕ್ತಿಯನ್ನು ಕೊಡುವುದಕ್ಕೆ ಆಗಿಲ್ಲವೆಂದರೆ, ಇದನ್ನು ಯಾವಾಗ ಮಾಡುವುದಕ್ಕೆ ಸಾಧ್ಯವಿದೆ? ಇದರ ಮುಖ್ಯ ಉದ್ದೇಶವೇನೆಂದರೆ, ಇವತ್ತಿನ ದಿವಸ ಒಳ್ಳೆಯ ಗ್ರಾಮ ಸಭೆ ಆಗದೇ ಇದ್ದರೂ ಕೂಡ ಅದಕ್ಕೆ ನಾವು ಅವಕಾಶವನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ನೀವು ಯಾವರೀತಿಯಾಗಿ ಸಬಲೀಕರಣ ಮಾಡುವುದಕ್ಕೆ ಸಾಧ್ಯವಾಗುತ್ತದೆಂದರೆ, ನೀವು ಅವರಿಗೆ ಅವಕಾಶಕೊಡಬೇಕಾಗುತ್ತದೆ. ನೀವು ಅವರಿಗೆ ಅವಕಾಶ ಕೊಟ್ಟಾಗ ಮಾತ್ರ ಅವರಿಂದ ಮಾಡುವುದಕ್ಕೆ ಆಗುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದು ನಮಗೆ ಗೊತ್ತಾಗುತ್ತದೆ. ಆಧರೆ, ಆ ಅವಕಾಶವನ್ನು ಇವತ್ತಿನ ದಿವಸ ಕೊಡುತ್ತಿಲ್ಲ... ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ತಾವು ನನಗೆ ಅವಕಾಶ ಕೊಡಬೇಕು. ಇವತ್ತಿನ ದಿವಸ ಇದರಲ್ಲಿ ಮತ್ತೊಂದು ವಿಷಯವನ್ನು ಹೇಳಿದ್ದಾರೆ. ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆ, ಗ್ರಾಮ ವಾರ್ಡ್ ಸಭೆಗಳ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂಬುದನ್ನು ತಾವು ಪ್ರಾರಂಭದಲ್ಲಿ ಹೇಳಿದ್ದೀರಿ. ಇವತ್ತು ಏನಾಗುತ್ತದೆಂದರೆ,.....

ಶ್ರೀ ಎಂ.ಪಿ. ರೇಣುಕಾಚಾರ್ಯ :- ಮಾನ್ಯ ಉಪಾಧ್ಯಕ್ಷರೆ, ಬೇಗ ಮುಗಿಸುವುದಕ್ಕೆ ಹೇಳಿ....

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಗ್ರಾಮ ಸಭೆಯಲ್ಲಿ ಇತ್ಯರ್ಥ ಆಗಬೇಕೆಂದು ಮಾನ್ಯ ಸಚಿವರು ಹೇಳಿದ್ದಾರೆ..... (ಗೊಂದಲ) ಖಂಡಿತವಾಗಿ ಇವತ್ತಿನ ದಿವಸ ಎಲ್ಲಾ ಜನರಿಗೆ ಗೊತ್ತಾದ ಮೇಲೆ ಎಲ್ಲಾ ಶಾಸಕರು ಏನು ಹೇಳುತ್ತಾರೆಂದರೆ, ಗ್ರಾಮಸಭೆಯಲ್ಲಿ ಗಲಾಟೆ ಮಾಡಿಸಿ ಇವರ ಹೆಸರನ್ನು ಬರೆಸಿ.... (ಗೊಂದಲ) ಆದ್ದರಿಂದ, ಇದು ಸಮಂಜಸವಲ್ಲ ಇದು ಕಾನೂನು ಬಾಹಿರವಾಗುತ್ತದೆ. ನನ್ನ ಮಾತನ್ನು ಹೇಳುವುದಕ್ಕೆ ತಾವು ಸಂಪೂರ್ಣವಾದಂಥ ಅವಕಾಶವನ್ನು ಕೊಡಬೇಕು. ಇವತ್ತು ಪಂಚಾಯತ್ ರಾಜ್‌ನಲ್ಲಿಯೂ ಕೂಡ ಚುನಾಯಿತ ಪ್ರತಿನಿಧಿಗಳು

ಹೊರಗಡೆ ಇದ್ದಾರೆ. ಆದ್ದರಿಂದ, ಅವರ ಕೈಯಲ್ಲಿ ಆಗುವುದಿಲ್ಲವೆಂದರೆ, ಅವರೆಲ್ಲಾ ನಾಲಾಯ್ಕೆ? ಅವರ ಕೈಯಲ್ಲಿ ಮಾಡುವುದಕ್ಕೆ ಆಗುವುದಿಲ್ಲವೇ? ಇಲ್ಲಿರುವ 224 ಜನರು ಮಾಡುವುದಕ್ಕೆ ಆಗುತ್ತದೆಯೇ? 80 ಸಾವಿರ ಜನರು ಮಾಡುವುದಕ್ಕೆ ಆಗದೇ ಇರತಕ್ಕಂಥ ಕೆಲಸವನ್ನು 224 ಜನ ಮಾಡುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಎ.ಎಸ್. ಬಸವರಾಜ್ :- ಸನ್ಮಾನ್ಯ ಉಪಾಧ್ಯಕ್ಷರೆ, ಅವರು ಇದರ ಬಗ್ಗೆ ವಿರೋಧ ಮಾಡುವುದಾದರೆ ನನ್ನದು ವಿರೋಧ ಇದೆ ಎಂದು ಹೇಳಲಿ. ಅದನ್ನು ಬಿಟ್ಟು ಇಲ್ಲಿ ಹರಿಕಥೆ ಮಾಡುತ್ತಿದ್ದಾರೆ. ಅವರ ಹರಿಕಥೆಯನ್ನು ಕೇಳುವುದಕ್ಕೆ ಯಾರು ಇಲ್ಲಿ ತಯಾರಿಲ್ಲ.

(ಗೊಂದಲ)

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಈ ಬಿಲ್ ಅನ್ನು ಖಂಡಿತವಾಗಿ ವಾಪಸ್ಸು ತೆಗೆದುಕೊಳ್ಳಬೇಕು. ಈ ಬಿಲ್‌ಗೆ ನಮ್ಮದು ವಿರೋಧವಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಲಿ ಪೆಟ್ಟು ಹಾಕುವಂತಹ ಶಾಸನ ಇದಾಗಿದೆ. ಈ ರಾಜ್ಯದಲ್ಲಿ ಸುಮಾರು 1 ಲಕ್ಷ ಜನ ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳಿದ್ದಾರೆ. ಅವರೆಲ್ಲರೂ ಬೀದಿಗಿಳಿದು ಈ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಈ ಬಿಲ್ ಅನ್ನುನಾನು ಹರಿದು ಹಾಕುತ್ತೇನೆ. ಈ ಬಿಲ್ ಪಂಚಾಯತ್ ರಾಜ್ ವ್ಯವಸ್ಥೆಗೆ ತದ್ವಿರುದ್ಧವಾದ ಬಿಲ್ ಆಗಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದರಿ ಬಿಲ್ ಅನ್ನು ಹರಿದು ಹಾಕಿದರು)

ಉಪಾಧ್ಯಕ್ಷರು :- ಮಾನ್ಯ ಮುಖ್ಯ ಮಂತ್ರಿಗಳು ಸಂಜೆ 5 : 00 ಗಂಟೆಗೆ ಒಂದು ಸಭೆಯನ್ನು ಕರೆದಿದ್ದಾರೆ. ಆದ್ದರಿಂದ, ಬಹಳ ಜನ ನಾವು ಮಾತನಾಡಿ ಹೋಗುತ್ತೇವೆ, ನಮಗೆ 5 ನಿಮಿಷ ಅವಕಾಶ ಕೊ9ಡ ಎಂದು ಈ ವಿಷಯವನ್ನು ಅಡ್ಡ ಇಟ್ಟುಕೊಂಡು ಮಾತನಾಡಿದಂಥ ಬಹಳ ಜನರು ಇನ್ನೂ ಇಲ್ಲಿಯೇ ಇದ್ದಾರೆ. ಮತ್ತೆ ಕೆಲವು ಈಗ ನಾವು ಹೋಗಬೇಕೆಂದು ಹೇಳುತ್ತಾ ಮಾತನಾಡುವುದಕ್ಕೆ ಎದ್ದಿದ್ದೀರಿ. ಮತ್ತೇಕೆ ತಾವು ಹೋಗುತ್ತಿದ್ದೀರಿ, ಇಲ್ಲಿಯೇ ಕುಳಿತುಕೊಳ್ಳಿ. ಈಗ ಅಲ್ಲಿಗೆ ಹೋಗುವುದು ಬೇಡ. ಅಲ್ಲಿ 5 ಗಂಟೆಗೆ ಸಭೆ ಕರೆದಿದ್ದಾರೆ ಎಂಬ ಪ್ರಕಟಣೆಯನ್ನು ನಾನೇ ಇಲ್ಲಿ ಓದಿದ್ದೇನೆ. ಈಗ ಇನ್ನೊಂದು ಪ್ರಕಟಣೆ ಇದೆ.